# ದಾಸ ಸಾಹಿತ್ಯ


೧. ಆದದ್ದೆಲ್ಲ ಒಳಿತೇ ಆಯಿತು
೨. ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂಥ
೩. ಬಾಗಿಲನು ತೆರೆದು
೪. ಭಾಗ್ಯದ ಲಕ್ಷ್ಮೀ ಬಾರಮ್ಮ ನಮ್ಮಮ್ಮಾ ಶ್ರೀ
೫. ದಾಸನ ಮಾಡಿಕೊ ಎನ್ನ ಸ್ವಾಮಿ
೬. ಡಂಗುರವ ಸಾರಿರಯ್ಯ
೭. ಎನಗೂ ಆಣೆ ರಂಗ ನಿನಗೂ ಆಣೆ
೮. ಗಿಳಿಯು ಪಂಜರದೊಳಿಲ್ಲ ಶ್ರಿ ರಾಮ ರಾಮ
೯. ಗೋವಿಂದ ನಿನ್ನ ನಾಮವೆ ಚಂದ
೧೦. ಹರಿಚಿತ್ತ ಸತ್ಯ ನಮ್ಮ ಹರಿ
೧೧. ಹರಿ ನಾರಾಯಣ
೧೨. ಹರಿಯಧಿಕ ಹರನಧಿಕ
೧೩. ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ
೧೪. ಜಗದೋಧ್ಧಾರನ ಆಡಿಸಿದಳೆಯೆಶೋಧ
೧೫. ಹೆಂಡತಿ ಪ್ರಾಣ ಹಿಂಡುತಿ
೧೬. ಇರಬೇಕು ಸಂಸಾರದಿ ಮನುಜ
೧೭. ಕದವನಿಕ್ಕಿದಳಿದೇಕೋ ಗಯ್ಯಾಳಿ ಮೂಳಿ
೧೮. ಕೈಲಾಸ ವಾಸ ಗೌರೀಶ ಈಶ
೧೯. ಕಂಡು ಧನ್ಯನಾದೆ ಶ್ರೀ
೨೦. ಕಂಡು ಕಂಡು ನೀ ಎನ್ನ ಕೈಬಿಡುವರೇ ಕೃಷ್ಣ
೨೧. ಕಂಗಳಿವ್ಯಾತಕೋ
೨೨. ಕರೆದರೆ ಬರಬಾರದೇ
೨೩. ಕರುಣಾಕರ ನೀನೆಂಬುವದೇತಕೋ
೨೪. ಕೇಳೋ ಸಚ್ಚರಿಥ
೨೫. ಕೃಷ್ಣಮೂರ್ತಿ ಕಣ್ಣ ಮುಂದೆ
೨೬. ಕೃಷ್ಣನ ನೋಡಿದೆ ಸರ್ವೋತ್ಕೃಷ್ಟನ ಪಾಡಿದೆ
೨೭. ಲಾಲಿಸಿದಳು ಮಗನ, ಯಶೋದೆ
೨೮. ಲಂಗೋಟಿ ಬಲು ಒಳ್ಳೆದಣ್ಣ
೨೯. ಮೋಸಹೋದೆನಲ್ಲೋ ನಾನು
೩೦. ಮಾಡು ಸಿಕ್ಕದಲ್ಲ
೩೧. ಮಂದ ಮತಿಯು ನಾನು

೩೨. ಮೂರುತಿಯನೆ ನಿಲ್ಲಿಸೋ
೩೩. ನಾ ನಿನ್ನ ಧ್ಯಾನದೊಳಿರಲು
೩೪. ನಗೆಯು ಬರುತಿದೆ ಎನಗೆ ನಗೆಯು ಬರುತಿದೆ
೩೫. ನಮ್ಮಮ್ಮ ಶಾರದೆ
೩೬. ನನ್ನಿಂದ ನಾನೇ ಜನಿಸಿ ಬಂದೆನೆ ಕೃಷ್ಣ ?
೩೭. ನೀ ಮಾಯೆಯೊಳಗೋ, ನಿನ್ನೊಳು ಮಾಯೆಯೋ
೩೮. ಒಲ್ಲನೊ ಹರಿ ತುಲಸಿ ಇಲ್ಲದ ಪೂಜೆ
೩೯. ಪೋಪು ಹೋಗೋಣ ಬಾರೊ
೪೦. ಇನ್ನು ದಯ ಬಾರದೇ
೪೧. ರಾಗಿ ತಂದೀರಾ
೪೨. ರಾಮ ನಾಮ ಪಾಯಸಕ್ಕೆ
೪೩. ರಾಮನೆಂಥ ಚೆಲುವನಮ್ಮ
೪೪. ರಂಗ ಕೊಳಲನೂದಲಾಗಿ ಮಂಗಳಮಯವಾಯ್ತು ಧರೆ
೪೫. ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
೪೬. ಶರಣು ಸಿದ್ದಿ ವಿನಾಯಕ ಶರಣು
೪೭. ಶ್ರೀಕಂಠ ಏನಗಿಷ್ಟು ದಯ ಮಾಡೋ
೪೮. ಶ್ರೀನಿಕೇತನ ಪಲಯಮ
೪೯. ಶ್ರೀಶ ಕೊಳಲನೂದಿದನಂದು ಶ್ರೀಧರನಿಂದು
೫೦. ತರಳೆ ರನ್ನೆ ಕಪ್ಪು ಮೈಯವ
೫೧. ತುಂಗಾ ತೀರ ವಿರಾಜಮ್
೫೨. ವಂದಿಪೆ ನಿನಗೆ ಗಣನಾಥ
೫೩. ವೆಂಕಟಾಚಲ ನಿಲಯಮ್
೫೪. ವೆಂಕಟೇಶ ದಯಮಾಡು
೫೫. ಯಾತಕೆ ದಯ ಮಾಡಲೊಲ್ಲೆ ರಂಗಯ್ಯ

**ಪುರಂದರ : ಆದದ್ದೆಲ್ಲಾ**

ಆದದ್ದೆಲ್ಲಾ ಒಳಿತೇ ಆಯಿತು
ನಮ್ಮ ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು । ಪ ।

ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಮಾಚಿ ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ । ಆದದ್ದೆಲ್ಲಾ ।

ಗೋಪಳ ಬುಟ್ಟಿ ಹಿಡಿಯುವುದಕ್ಕೆ
ಭೂಪತಿಯಂತೆ ಗರ್ವಿಸುತಿದ್ದೆ
ಆ ಪತ್ನೀ ಕುಲ ಸಾವಿರವಾಗಲಿ
ಗೋಪಳ ಬುಟ್ಟೀ ಹಿಡಿಸಿದಳಯ್ಯ । ಆದದ್ದೆಲ್ಲಾ ।

ತುಳಸೀ ಮಾಲೆಯ ಹಾಕುವುದಕ್ಕೆ
ಅರಸನಾಗಿ ನಾಚುತಲಿದ್ದೆ
ಸರಸಿಜಾಕ್ಷ ಶ್ರೀ ಪುರಂದರ ವಿಠಲನು
ತುಳಸೀ ಮಾಲೆಯ ಹಾಕಿದನಯ್ಯ । ಆದದ್ದೆಲ್ಲಾ ।

**ಪುರಂದರ : ಅಜ್ಞಾನಿಗಳ ಕೂಡ**
ಮೋಹನ
ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡ ಜಗಳವೆ ಲೇಸು । ಪ ।

ಉಂಬುಡುವದಕ್ಕಿರುವ ಅರಸನೋಲಗಕ್ಕಿಂತ
ತುಂಬಿದೂರೊಳಗೆ ತಿರಿದುಂಬುವದೆ ಲೇಸು
ಹಂಬಲಿಸಿ ಹಾಳು ಹರಟೆ ಹೊಡೆವುದಕ್ಕಿಂತ
ನಂಬಿ ಹರಿದಾಸರೊಳಾಡುವದೆ ಲೇಸು । ೧ ।

ಒಡನೆ ಹಂಗಿಸುವವನ ಪಲೋಗರಕ್ಕಿಂತ
ಕುಡಿನೀರ ಕುಡಿದುಕೊಂಡಿಹುದೆ ಲೇಸು
ಬಿಡದೆ ಕಡಿದಾಡುವರ ನೆರೆಯಲಿಹುದಕ್ಕಿಂತ
ಅಡವಿಯೊಳಗಜ್ಞಾತವಾಸವೆ ಲೇಸು । ೨ ।

ಮಸೆದು ಮತ್ಸರಿಪ ಸತಿಯೊಡನೆ ಸಂಸಾರಕ್ಕಿಂತ
ಹಸನಾದ ಹಾಳು ಗುಡಿಗಲೆ ಲೇಸು
ಬಿಸಜಾಕ್ಷ ಪುರಂದರವಿಠಲನ ನೆನೆನೆನೆದು
ವಸುಧೆಯೊಳು ಚಿರಕಾಲವಿರುವದೆ ಲೇಸು । ೩ ।

**ಕನಕದಸ -- ಬಾಗಿಲನು ತೆರೆದು**

ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ
ಕೂಗಿದರೂ ಧ್ವನಿ ಕೇಳಲಿಲ್ಲವೇ, ನರ ಹರಿಯೆ । ಪ ।

ಪರಮಪದದೊಳಗೆ ವಿಷಧರನ ಕಲ್ಪದಲಿ ನೀ
ಸಿರಿ ಸಹಿಥ ಕ್ಷೀರವಾರಿಧಿಯೊಳಿರಲು
ಕರಿರಾಜ ಕಷ್ಟದಲಿ ಆದಿಮೂಲ ಎಂದು
ಕರೆಯಲಾಕ್ಷಣ ಬಂದು ಒದಗಿದೆಯೊ, ನರ ಹರಿಯೆ । ೧ ।

ಕಡುಕೋಪದಿಮ್ ಖಳನು ಖಡುಗವನೆ ಪಿಡಿದೂ
ನಿನ್ನೊಡೆಯನೆಲ್ಲಿಹನು ಎಂದು ನುಡಿಯೆ
ಧೃಡ ಭಕುತಿಯಲಿ ಶಿಶುವು ಬಿಡದೆ ನಿನ್ನನು ಭಜಿಸೆ
ಸಡಗರದಿ ಕಂಬದಿಂದೊಡೆದೆ, ನರ ಹರಿಯೆ । ೨ ।

ಯಮ ಸುತನ ರಾಣಿಗೆ ಅಕ್ಷಯವಸನವನ್ನಿತ್ತೆ
ಸಮಯದಲಿ ಅಜಮಿಳನ ಪೊರೆದೆ
ಸಮಯಾಸಮಯವುಂಟೆ ಭಕ್ತವತ್ಸಲ ನಿನಗೆ
ಕಮಲಾಕ್ಷ ಕಾಗಿನೆಲೆಯಾದಿಕೇಶವನೆ । ೩ ।

**ಪುರಂದರ -- ಭಾಗ್ಯದ ಲಕ್ಷ್ಮೀ**

*ಮಧ್ಯಮಾವತಿ, ಆದಿ ತಾಳ*

ಭಾಗ್ಯದ ಲಕ್ಷ್ಮೀ ಬಾರಮ್ಮ ನಮ್ಮಮ್ಮಾ ಶ್ರೀ
ಸೌಭಾಗ್ಯದ ಲಕ್ಷ್ಮೀ ಬಾರಮ್ಮಾ । ಪ ।

ಗೆಜ್ಜೆ ಕಾಲ್ಗಳ ಧ್ವನಿಯ ತೋರುತ
ಹೆಜ್ಜೆಯ ಮೆಲೆ ಹೆಜ್ಜೆಯ ನಿಕ್ಕುತ
ಸಜ್ಜನ ಸಾಧು ಪೂಜೆಯ ವೇಳೆಗೆ
ಮಜ್ಜಿಗೆಯೊಳಗಿನ ಬೆಣ್ಣೆಯಂತೆ । ೧ ।

ಕನಕ ವೃಷ್ಟಿಯ ಕರೆಯುತ ಬಾರೆ
ಮನಕಾಮನೆಯಾ ಸಿದ್ಧಿಯ ತೋರೆ
ದಿನಕರ ಕೋಟಿ ತೇಜದಿ ಹೊಳೆಯುವ
ಜನಕರಾಯನ ಕುಮಾರಿ ಬೇಗ । ೨ ।

ಶಂಕೆ ಇಲ್ಲದ ಭಾಗ್ಯವ ಕೊಡಲೂ
ಕಂಕಣ ಕೈಯ ತಿರುವುತ ಬಾರೆ
ಕುಂಕುಮಾಂಕಿತೆ ಪಂಕಜ ಲೋಚನೆ
ವೆಂಕಟರಮಣನ ಬಿಂಕದ ರಾಣೀ । ೩ ।

ಆತ್ತಿತ್ತಗಲದೆ ಭಕ್ತರ ಮನೆಯೊಳು
ನಿತ್ಯ ಮಹೋತ್ಸವ ನಿತ್ಯ ಸುಮಂಗಲ
ಸತ್ಯದಿ ತೋರುತ ಸಾಧು ಸಜ್ಜನರಾ
ಚಿತ್ತದಿ ಹೊಳೆಯುವ ಪುತ್ಥಳಿ ಗೊಂಬೆ । ೪ ।

ಸಕ್ಕರೆ ತುಪ್ಪದ ಕಾಲುವೆ ಹರಿಸಿ
ಶುಕ್ರ ವಾರದ ಪೂಜೆಯ ವೇಳೆಗೆ
ಅಕ್ಕರೆಯುಳ್ಳ ಅಳಗಿರಿ ರಂಗನ
ಚೊಕ್ಕ ಪುರಂದರ ವಿಠಲನ ರಾಣೀ । ೫ ।

**ಪುರಂದರ -- ದಾಸನ ಮಾಡಿಕೊ ಎನ್ನ**
ರಾಗ: ನಾದನಾಮಕ್ರಿಯೆ

ದಾಸನ ಮಾಡಿಕೊ ಎನ್ನ ಸ್ವಾಮಿ
ಸಾಸಿರ ನಾಮದ ವೆಂಕಟರಮಣ ।ಪ।

ದುರ್ಬುದ್ಧಿಗಳನೆಲ್ಲ ಬಿಡಿಸೊ ನಿನ್ನ
ಕರುಣಕವಚವೆನ್ನ ತೊಡಿಸೊ
ಚರಣಸೇವೆ ಎನಗೆ ಕೊಡಿಸೊ ಅಭಯ
ಕರಪುಷ್ಪವನೆನ್ನ ಶಿರದಲ್ಲಿ ಮುಡಿಸೊ ।೧।

ಧೃಢ ಭಕ್ತಿ ನಿನ್ನಲ್ಲಿ ಬೇಡಿ ನಾ
ಅಡಿಗೆರಗುವೆನಯ್ಯ ಅನುದಿನ ಪಾಡಿ
ಕಡೆಗಣ್ಣಿಲೇಕೆನ್ನ ನೋಡಿ ಬಿಡುವೆ
ಕೊಡು ನಿನ್ನ ಧ್ಯಾನವ ಮನಶುಚಿ ಮಾಡಿ ।೨।

ಮೊರೆ ಹೊಕ್ಕವರ ಕಾವ ಬಿರುದು ಎನ್ನ
ಮರೆಯದೆ ರಕ್ಷಣೆ ಮಾಡಯ್ಯ ಪೊರೆದು
ದುರಿತಗಳೆಲ್ಲವ ತರಿದು ಸಿರಿ
ಪುರಂದರ ವಿಠಲ ಎನ್ನನು ಪೊರೆದು ।೩।

**ಪುರಂದರ -- ಡಂಗುರವ ಸಾರಿರಯ್ಯ**
ರಾಗ : ವಸಂತ ತಾಳ : ಆದಿ

ಡಂಗುರವ ಸಾರಿರಯ್ಯ ಡಿಂಗರಿಗರೆಲ್ಲರು
ಭೂಮಂಡಲಕೆ ಪಾಂಡುರಂಗ ವಿಠಲ ಪರದೈವವೆಂದು ॥ಡಂಗುರವ॥

ಹರಿಯು ಮುಡಿದ ಹೂವು ಹರಿವಾಣದೊಳಿಟ್ಟುಕೊಂಡು
ಹರುಷದಿಂದಾಡಿ ಪಾಡಿ ಕುಣಿದು ಕುಪ್ಪಳಿಸುತ ॥ಡಂಗುರವ॥

ಒಡಲ ಜಾಗಟೆಯ ಮಾಡಿ ನುಡಿವ ನಾಲಿಗೆಯ ಪಿಡಿದು
ಢಮ್ ಢಮ್ ಢಣಾಢಣಾರೆಂದು ಹೊಡೆದು ಚಪ್ಪಾಳಿಕ್ಕುತ ॥ಡಂಗುರವ॥

ಇಂತು ಜಗಕ್ಕೆಲ್ಲ ಲಕ್ಷ್ಮೀಕಾಂತನೆಂದು
ಸಂತತ ಪುರಂದರ ವಿಠಲ ಪರದೈವವೆಂದು ॥ ಡಂಗುರವ ॥

**ಪುರಂದರ -- ಎನಗೂ ಆಣೆ**

ರಾಗ : ಕೇದಾರ, ತಾಳ : ಆದಿ

ಎನಗೂ ಆಣೆ ರಂಗ ನಿನಗೂ ಆಣೆ
ಎನಗೂ ನಿನಗೂ ಇಬ್ಬರಿಗೂ ನಿನ್ನ ಭಕ್ತರಾಣೆ । ಪ ।

ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ ರಂಗ
ಎನ್ನ ಕೈ ಬಿಟ್ಟು ಪೋದರೆ ನಿನಗೆ ಆಣೆ ।ಎನಗೂ।

ತನು ಮನದಲಿ ವಂಚಿತನಾದರೆ ಎನಗೆ ಆಣೆ ರಂಗ
ಮನಸು ನಿನ್ನಲಿ ನಿಲಿಸದಿದ್ದರೆ ನಿನಗೆ ಆಣೆ ।ಎನಗೂ।

ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ ರಂಗ
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ ।ಎನಗೂ।

ಕಾಕು ಮನುಜರ ಸಂಗವ ಮಾಡಿದರೆನಗೆ ಆಣೆ ರಂಗ
ಲೌಕಿಕವ ನೀ ಬಿಡಿಸದಿದ್ದರೆ ನಿನಗೆ ಆಣೆ ।ಎನಗೂ।

ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ ರಂಗ
ಪುರಂದರ ವಿಠಲ ನೀನೊಲಿಯದಿದ್ದರೆ ನಿನಗೆ ಆಣೆ ।ಎನಗೂ।

**ಪುರಂದರ -- ಗಿಳಿಯು ಪಂಜರದೊಳಿಲ್ಲ ಶ್ರೀ ರಾಮ ರಾಮ**

ರಾಗ: ಅನಂದ ಭೈರವಿ, ತಾಳ: ಆದಿ

ಗಿಳಿಯು ಪಂಜರದೊಳಿಲ್ಲ ಶ್ರೀ ರಾಮ ರಾಮ
ಗಿಳಿಯು ಪಂಜರದೊಳಿಲ್ಲ ।ಪ।

ಅಕ್ಕ ನಿನ್ನ ಮಾತ ಕೇಳಿ
ಚಿಕ್ಕದೊಂದು ಗಿಳಿಯ ಸಾಕಿದೆ
ಅಕ್ಕ ನಾನಿಲ್ಲದ ವೇಳೆ
ಬೆಕ್ಕು ಕೊಂಡು ಹೋಯಿತಯ್ಯೋ । ೧ ।

ಆರ್ತಿಗೊಂದು ಗಿಳಿಯ ಸಾಕಿದೆ
ಮುತ್ತಿನ ಹಾರವ ಹಾಕಿದೆ
ಮುತ್ತುಕೊಂಡು ಗಿಳಿಯು ತಾನು
ಎತ್ತಲೋಡಿ ಹೋಯಿತಯ್ಯೋ । ೨ ।

ಹಸಿರು ಬಣ್ಣದ ಗಿಳಿಯು
ಕುಶಲ ಬುದ್ಧಿಯ ಗಿಳಿಯು
ಅಸುವ ಕುಂದಿ ಗಿಳಿಯು ತಾನು
ಹಸನಗೆಡಿಸಿ ಹೋಯಿತಯ್ಯೋ । ೩ ।

ಮುಪ್ಪಾಗದ ಬೆಣ್ಣೆಯನ್ನು
ತಪ್ಪದೆ ನಾ ಹಾಕಿ ಸಾಕಿದೆ
ಒಪ್ಪದಿಂದ ಗಿಳಿಯು ಈಗ
ತೆಪ್ಪನೆ ಹಾರಿ ಹೋಯಿತಯ್ಯೋ । ೪ ।

ರಾಮ ರಾಮ ಎಂಬ ಗಿಳಿಯು
ಕೋಮಲ ಕಾಯದ ಗಿಳಿಯು
ಸಾಮಜ ಪೋಷಕ ತಾನು
ಪ್ರೇಮದಿ ಸಾಕಿದ ಗಿಳಿಯು । ೫ ।

ಒಂಭತ್ತು ಬಾಗಿಲ ಮನೆಯು
ತುಂಬಿದ ಸಂದಣಿ ಇರಲು
ಕಂಬ ಮುರಿದು ಡಿಂಭ ಬಿದ್ದು
ಅಂಬರಕ್ಕೆ ಹಾರಿ ಹೊಯಿತು ।೬।

ಅಂಗೈಯಲ್ಲಾಡುವ ಗಿಳಿಯು
ಮುಂಗೈ ಮೇಲಿನ ಗಿಳಿಯು
ರಂಗ ಪುರಂದರ ವಿಠಲನಂತ
ರಂಗದೊಳಿಹ ಗಿಳಿಯು ।೭।

**ಪುರನ್ದರ -- ಗೋವಿಂದ ನಿನ್ನ ನಾಮವೆ ಚಂದ**

ಗೋವಿಂದ ನಿನ್ನ ನಾಮವೆ ಚಂದ

ಅಣು ರೇಣು ತೃಣಕಾಷ್ಟ ಪರಿಪೂರ್ಣ ಗೊವಿಂದ
ನಿರ್ಮಲಾತ್ಮಕನಾಗಿ ಇರುವುದೇ ಆನಂದ । ಗೋವಿಂದ ।

ಸೃಷ್ಟಿ ಸ್ಥಿಥಿಲಯ ಕಾರಣ ಗೊವಿಂದ
ಈಪರಿಮಹಿಮೆಯ ತಿಳಿಯುವುದೆ ಆನಂದ । ಗೋವಿಂದ ।

ಪರಮಪುರುಷ ಶ್ರೀ ಪುರಂದರ ವಿಠಲ
ಹಿಂಗಡ ದಾಸರ ಸಲಹುವುದೆ ಆನಂದ । ಗೋವಿಂದ ।

**ಪುರನ್ದರ -- ಹರಿಚಿತ್ತ ಸತ್ಯ ನಮ್ಮ**
*ರಾಗ: ಝಿಂಜೊಟಿ ತಾಳ: ...*

ಹರಿಚಿತ್ತ ಸತ್ಯ ನಮ್ಮ ಹರಿ ಚಿತ್ತ ಸತ್ಯ
ನರ ಚಿತ್ತಕೆ ಬಂದದು ಲವಲೇಶ ನಡೆಯದು । ಹರಿ ।

ಸುದತಿ ಮಕ್ಕಳ ಭಾಗ್ಯ ಬಯಸೋದು ನರಚಿತ್ತ
ಮದುವ್ಯಾಗದಿರುವುದು ಹರಿಚಿತ್ತವು । ಹರಿ ।

ಕುದುರೆ ಅಂದಾನ ಆನೆ ಬಯಸೋದು ನರಚಿತ್ತ
ಪಾದಚಾರಿ ಆಗೊದು ಹರಿಚಿತ್ತವಯ್ಯ । ಹರಿ ।

ಪುರಂದರ ವಿಠಲನ ಬಯಸೋದು ನರಚಿತ್ತ
ದುರಿತವ ಕಳೆವುದು ಹರಿಚಿತ್ತವಯ್ಯ । ಹರಿ ।

**ಪುರಂದರ -- ಹರಿ ನಾರಾಯಣ**
ತಾಳ : ಆದಿ

ಹರಿ ನಾರಾಯಣ ಹರಿ ನಾರಾಯಣ
ಹರಿ ನಾರಾಯಣ ಎನು ಮನವೆ
ನಾರಾಯಣನೆಂಬೋ ನಾಮದ ಬೀಜವ
ನಾರದ ಬಿತ್ತಿದ ಧರೆಯೊಳಗೆ ॥ ಹರಿ ॥

ಸರಳ ಧ್ರುವನಿಂದ ಅಂಕುರಿಸಿತು ಅದು
ವರ ಪ್ರಹ್ಲಾದನಿಂದ ಮೊಳೆಯಾಯ್ತು
ಧರಣೀಶ ರುಕುಮಾಂಗದನಿಂದ ಚಿಗುರಿತು
ಕುರು ಪಿತಾಮಹನಿಂದ ಹೂವಾಯ್ತು ॥ ಹರಿ ॥

ವಿಜಯನ ಸತಿಯಿಂದ ಕಾಯಾಯ್ತು
ಅದು ಗಜೇಂದ್ರನಿಂದ ದೊರೆ ಹಣ್ಣಾಯ್ತು
ದ್ವಿಜ ಶುಕ ಮುನಿಯಿಂದ ಪರಿಪಕ್ವವಾಯಿತು
ಅಜಮಿಳ ತಾನುಂಡು ರಸ ಸವಿದ ॥ ಹರಿ ॥

ಕಾಮಿತ ಫಲವೆಂಬ ನಾಮವೊಂದಿರಲಾಗಿ
ಹೋಮ ನೇಮ ಜಪ ತಪವ್ಯಾಕೆ
ಸ್ವಾಮಿ ಶ್ರೀ ಪುರಂದರ ವಿಠಲನ ನಾಮವ
ನೇಮದಿಂದಲಿ ನೆನೆ ಮನವೆ ನೇಮದಿಂದಲಿ ನೆನೆ ಮನವೆ ॥ ಹರಿ ॥

**ಪುರಂದರ -- ಹರಿಯಧಿಕ ಹರನಧಿಕ**
ರಾಗ : ಕಾಂಭೋದಿ, ತಾಳ : ಝಂಪೆ

ಹರಿಯಧಿಕ ಹರನಧಿಕ ಎಂದು ಹೋರಾಡದಿರಿ
ಹರಿ-ಹರರ ಭಕ್ತರೇ ಸಾಕ್ಷಿ ಲೋಕದೊಳು । ಪ ।

ಹರಿಯೆಂದು ಪ್ರಹ್ಲಾದ ಬಂದ ದುರಿತವ ಗೆಲಿದ
ಹರನೆಂದು ಅವನ ಪಿತ ತಾನೆ ಅಳಿದ
ಹರಿಯೆಂದು ವಿಭೀಷಣನು ಸ್ಥಿರ-ಪಟ್ಟವೈದಿದ

ಹರನೆಂದು ರಾವಣನು ಹತನಾದನಯ್ಯ । ೧ ।

ಹರಿಯೆಂದು ಭೀಮ ಪರಿಪೂರ್ಣಕಾಮನು ಆದ
ಹರನೆಂದ ಆ ಜರಾಸಂಧ ಹತನಾದ
ಹರಿಯ ಬಾಗಿಲ ಕಾಯ್ದ ಬಲಿ ಭಾಗ್ಯವಂತನಾದ
ಹರನ ಬಾಗಿಲ ಕಾಯ್ದ ಬಾಣನಳಿದ । ೨ ।

ಹರನ ವರವನು ಪಡೆದ ಭಸ್ಮಾಸುರನು ಅವನ
ಶಿರದಲ್ಲಿ ತನ್ನ ಕರವಿಡಲು ಬರಲು
ಹರಿ ನೀನೆ ಗತಿಯೆಂದು ತ್ರಿಪುರಾರಿ ಮೊರೆಯಿಡಲು
ವರದ ಪುರಂದರ ವಿಠಲ ಕಾಯ್ದ-ದರಿಯ । ೩ ।

**ಪುರಂದರ ದಾಸ -- ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ**
ರಾಗ : ಕಾಂಭೋಜ ತಾಳ : ಝಂಪೆ

ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ
ಪದುಮನಾಭನ ಪಾದ ಭಜನೆ ಸುಖವಯ್ಯ । ಪ ।

ಕಲ್ಲಾಗಿ ಇರಬೇಕು ಕಠಿಣ ಭವ ತೊರೆಯೊಳಗೆ
ಬಿಲ್ಲಾಗಿ ಇರಬೇಕು ಬಲ್ಲವರೊಳಗೆ
ಮೆಲ್ಲನೆ ಮಾಧವನ ಮನದಿ ಮೆಚ್ಚಿಸಬೇಕು
ಬೆಲ್ಲವಾಗಿರಬೇಕು ಬಂಧು ಜನರೊಳಗೆ । ೧ ।

ಬುದ್ಧಿಯಲಿ ತನುಮನವ ತಿದ್ದಿಕೊಳುತಿರಬೇಕು
ಮುದ್ದಾಗಿ ಇರಬೇಕು ಮುನಿಯೋಗಿಗಳಿಗೆ
ಮಧ್ವ ಮತಾಬ್ಧಿಯಲಿ ಮೀನಾಗಿ ಇರಬೇಕು
ಶುದ್ಧನಾಗಿರಬೇಕು ಕರಣ ತ್ರಯಂಗಳಲಿ । ೨ ।

ವಿಷಯ ಭೋಗದ ತೃಣಕೆ ಉರಿಯಾಗಿ ಇರಬೇಕು
ನಿಶಿಹಗಲು ಶ್ರೀಹರಿಯ ಧ್ಯಾನಿಸಲುಬೇಕು
ವಸುಧೆಯೊಳು ಪುರಂದರ ವಿಠಲನ ನಾಮವ
ಹಸನಾಗಿ ನೆನೆನೆನೆದು ಸುಖಿಯಾಗಬೇಕು । ೩ ।

**ಪುರಂದರ : ಜಗದೋದ್ಧಾರನ**

ಜಗದೋದ್ಧಾರನ ಆಡಿಸಿದಳೆಶೋಧೆ । ಜ ।

ಜಗದೋದ್ಧಾರನ ಮಗನೆಂದು ತಿಳಿಯುತ
ಸುಗುಣಾಂತ ರಂಗನ ಆಡಿಸಿದಳೆಶೋಧೆ । ೧ ।

ನಿಗಮಕೆ ಸಿಲುಕದ ಅಗಣಿತ ಮಹಿಮನ
ಮಗುಗಳ ಮಾಣಿಕ್ಯನ ಆಡಿಸಿದಳೆಶೋಧೆ । ೨ ।

ಅಣೋರಣೀಯನ ಮಹತೋ ಮಹೀಯನ
ಅಪ್ರಮೇಯನ ಆಡಿಸಿದಳೆಶೋಧೆ । ೩ ।

ಪರಮಪುರುಷನ ವರ ವಾಸುದೇವನ
ಪುರಂದರ ವಿಠಲನ ಆಡಿಸಿದಳೆಶೋಧೆ । ೪ ।

**ಪುರಂದರ ದಾಸ -- ಹೆಂಡತಿ ಪ್ರಾಣ ಹಿಂಡುತಿ**

ಹೆಂಡತಿ ಪ್ರಾಣ ಹಿಂಡುತಿ
ದೊಡ್ಡ ಕೊಂಡ ಕೋತಿಯಂತೆ ಕುಣಿಕುಣಿಸುತ್ತ । ಪ ।

ಹೊತ್ತಾರೆ ಏಳುತ್ತಿ ಹೊರಗೆ ತಿರುಗಾಡುತ್ತಿ
ಹೊತ್ತು ಹೋಯಿತು ಭತ್ಯ ತಾರೆನ್ನುತ್ತಿ
ಉತ್ತಮ ಗುರುಹಿರಿಯರ ಮಾತು ಮೀರುತ್ತಿ
ಮೃತ್ಯು ದೇವತೆಯಂತೆ ಮನೆಯೊಳಗಿರುತಿ । ೧ ।

ಇಲ್ಲದ್ದು ಬೇಡುತ್ತಿ ಸುಳ್ಳು ಮಾತಾಡುತ್ತಿ
ಒಳ್ಳೆ ಊಟವನುಂಡು ಕುಳಿತಿರ್ಪೆನೆಂತಿ
ಎಳ್ಳಿನಷ್ಟು ಕೆಲಸ ಮಾಡಲಾರೆನೆಂತಿ
ಎಲ್ಲೆಲ್ಲಿ ತಲೆಯೆತ್ತದ್_ಹಾಂಗೆ ಮಾಡುತ್ತಿ । ೨ ।

ಹಿರಿತನಕ್_ಹೋಗುತ್ತಿ ಗರುವಿಕೆ ಮಾಡುತ್ತಿ
ನೆರೆಹೊರೆಯವರ ಕೂಡೆ ಬಡಿದಾಡುತ್ತಿ
ದೊರೆ ಸಿರಿ ಪುರಂದರ ವಿಠಲನ ಸ್ಮರಿಸದೆ
ದುರಿತಕ್ಕೆ ಗುರಿಯಾಗಿ ನೀ ನಿಲ್ಲುತ್ತಿ । ೩ ।

**ಪುರಂದರ -- ಇರಬೇಕು ಸಂಸಾರದಿ ಮನುಜ**
ರಾಗ : ನಾದನಾಮಕ್ರಿಯೆ, ತಾಳ : ಆದಿ

ಇರಬೆಕು ಸಂಸಾರದಿ ಮನುಜ
ಇರದಂತಿರಬೆಕು, ಇರದಂತಿರಬೆಕು
(ಅಥವಾ)
ಇರಬೆಕು ಇಲ್ಲದಿರಬೆಕು ಶ್ರೀ
ಹರಿದಾಸರು ಸಂಸಾರದೊಳಗೆ

ಕುಲಸತಿಯಾದರೆ ಕೂಡಿರಬೆಕು
ಸುಲಭದಿಂದಲಿ ಸ್ವರ್ಗ ಸೂರಾಡಬೆಕು
ಕಲಹಗಂಟಿ ಸತಿ ಕರ್ಕಶೆಯಾದರೆ
ಹಲವು ಪರಿಯಿಂದ ಹೊರಗಾಗಬೆಕು । ೧ ।

ಮಕ್ಕಳು ತಾವು ಮತಿವಂತರಾದರೆ
ಅಕ್ಕರೆಯಿಂದಲಿ ಕೂಡಿರಬೆಕು
ಚಿಕ್ಕತನದಿ ಬುದ್ಧಿ ಭೋರುಂಡನಾದರೆ
ಗಕ್ಕನೆ ಅಲ್ಲಿಂದ ಹೊರಗಾಗಬೆಕು । ೨ ।

ದುಷ್ಟರ ಕಂಡರೆ ದೂರವಿರಬೆಕು
ಶಿಷ್ಟರ ಕಂಡರೆ ಕೈ ಮುಗಿಯಬೆಕು
ದಿಟ್ಟ ಶ್ರೀ ಪುರಂದರ ವಿಠಲರಾಯನ
ಗಟ್ಟಿಯಾಗಿ ನಿರುತ ನೆರೆ ನಂಬಬೆಕು ।೩।

**ಪುರಂದರ -- ಇನ್ನೂ ದಯಬಾರದೆ ದಾಸನ ಮೇಲೆ**

ರಾಗ: ಕಲ್ಯಾಣಿ ವಸಂತಮ್ ತಾಳ: ಕಂಡ ಚಾಪು

ಇನ್ನೂ ದಯಬಾರದೆ ದಾಸನ ಮೇಲೆ
ಪನ್ನಗ ಶಯನ ಶ್ರೀ ಪರಮಪುರುಷ, ಹರಿಯೇ । ಇನ್ನೂ ।

ನಾನಾ ದೇಶಗಳಲ್ಲಿ ನಾನಾ ಬಂಧುಗಳಲ್ಲಿ
ನಾನಾ ಯೋನಿಗಳಲ್ಲಿ ನಲಿದು ಹುಟ್ಟಿ
ನಾನು ನನ್ನದು ಎಂಬ ನರಕದೊಳಗೇ ಬಿದ್ದು
ನೀನೇ ಗತಿ ಎಂದು ನಂಬಿದ ದಾಸನ ಮೇಲೇ । ಇನ್ನೂ ।

ಮನೋ ವಾ ಕಾಯದಿಂದ ಮಾಡುವ ಕರ್ಮಗಳೆಲ್ಲ
ದಾನವಾಂತಕ ನಿನಗೆ ದಾನವಿತ್ತೆ
ಏನು ಮಾಡಿದರೇನೂ ಪ್ರಾಣ ನಿನದೂ ಸ್ವಾಮಿ
ಶ್ರೀನಾಥ ಪುರಂದರ ದಾಸನ ಮೇಲೇ । ಇನ್ನೂ ।

**ಪುರಂದರ -- ಕದವನಿಕ್ಕಿದಳೇಕೋ ಗಯ್ಯಾಳಿ**

ಕದವನಿಕ್ಕಿದಳಿದೇಕೊ ಗಯ್ಯಾಳಿ ಮೂಳಿ
ಕದವನಿಕ್ಕಿದಳಿದೇಕೊ
ಚಿಲಕವಲ್ಲಾಡುತಿದೆ ಒಳಗಿದ್ದ ಪಾಪವು
ಹೊರಗೆ ಹೋದೀತೆಂದು । ಪ ।

ಭಾರತ ರಾಮಾಯಣ ಪಂಚರತ್ರಾಗಮ
ಸಾರತತ್ವದ ಬಿಂದು ಒಳಗೆ ಬಿದ್ದೀತೆಂದು । ೧ ।

ಅಂದುಗೆ ಕಿರಿಗೆಜ್ಜೆ ಮುಂಗಾಲಿಲಳವಟ್ಟು
ಧಿಮ್ ಧಿಮ್ ಧಿಮಿಕೆಂದು ಕುಣಿವ ದಾಸರ ಕಂಡು । ೨ ।

ನಂದನ ಕಂದ ಗೋವಿಂದನ ಪೊಗಳುವ
ಚೆಂದವಾದ ಧ್ವನಿ ಹೋದೀತು ಕರ್ಣಕೆಂದು । ೩ ।

ಹರಿ ಚರಣ ಪಾದ ಸರಸಿಜಯುಗಳದ
ಪರಮ ಪಾವನವಾದ ರಜವು ಬಿದ್ದೀತೆಂದು । ೪ ।

ಮಂಗಳ ಮೂರುತಿ ಪುರಂದರ ವಿಠಲನ
ತುಂಗ ವಿಕ್ರಮ ಪಾದದಂಗುಲಿ ಸೋಕೀತೆಂದು ।೫।

**ವಿಜಯವಿಠಲದಾಸರು -- ಕೈಲಾಸ ವಾಸ**

ಕೈಲಾಸ ವಾಸ ಗೌರೀಶ ಈಶ
ತೈಲಧಾರೆಯಂತೆ ಮನಸು ಕೊಡೋ ಹರಿಯಲ್ಲಿ, ಶಂಭೋ ॥ ಪ ॥

ಅಹೊರಾತ್ರಿಯಲ್ಲಿ ನಾನು ಅನುಜರಗ್ರಣಿಯಾಗಿ
ಮಹಿಯೊಳಗೆ ಚರಿಸಿದೆನೋ ಮಹದೇವನೇ
ಅಹಿಭೂಷಣನೆ ಎನ್ನ ಅವಗುಣಗಳೆಣಿಸದಲೆ
ವಿಹಿತಧರ್ಮದಿ ವಿಷ್ಣು ಭಕುತಿಯನು ಕೊಡೋ ಶಂಭೋ ॥ ೧ ॥

ಮನಸು ಕಾರಣವಲ್ಲ ಪಾಪಪುಣ್ಯಕ್ಕೆಲ್ಲ
ಅನಲಾಕ್ಷ ನಿನ್ನ ಪ್ರೇರಣೆಯಿಲ್ಲದೆ
ಧನುಜಗತಮನಹಾರಿ ದಂಡ-ಪ್ರಣಾಮವ ಮಾಡ್ವೆ
ಮಣಿಸೊ ಈ ಶಿರವ ಸಜ್ಜನ ಚರಣ ಕಮಲದಲ್ಲಿ ಶಂಭೋ ॥ ೨ ॥

ಭಗೀರಥಿಧರನೆ ಭಯವ ಪರಿಹರಿಸಯ್ಯ
ಲೇಸಾಗಿ ನೀ ಸಲಹೊ ಸಂತತ ಸರ್ವ ದೇವ
ಭಾಗವತ ಜನ ಪ್ರೀಯ ವಿಜಯವಿಠಲನಂಘ್ರಿ
ಜಗು ಮಾಡದೆ ಭಜಿಪ ಭಾಗ್ಯವನು ಕೊಡೋ ಶಂಭೋ ॥ ೩ ॥

**ಕಮಲೇಶ ವಿಠಲ -- ಕಂಡು ಧನ್ಯನಾದೆ**

ಕಂಡು ಧನ್ಯನಾದೆ ಶ್ರೀ ಉಡುಪಿ ಕೃಷ್ಣನ
ಕಣ್ಣಾರೆ ನಾ ಕಂಡು....

ಕಂಡು ಧನ್ಯನಾದೆನು ಬ್ರಹ್ಮಾಂಡ ನಗರಿಯೊಡೆದ ಹರಿಯ
ತಂಡ ತಂಡದಿ ಪೂಜೆಗೊಳುತ ಪಾಂಡವರನೆ ಸಲಹಿದವನ ॥ ಕಂಡು ॥

ಗೆಜ್ಜೆ ಕಾಲ ಕಡಗವಿಟ್ಟು ಮಜ್ಜಿಗೆ ಕಡೆಗೋಲ ಪಿಡಿದು
ಹೆಜ್ಜೆ ಪಂಕ್ತಿ ಊಟವುಂಡು ಗುಜ್ಜು ವೇಷ ಧರಿಸಿದವನ ॥ ಕಂಡು ॥

ಎಂಟು ಮಠದ ಯತಿಗಳು ತನ್ನ ಬಂಟರೆಂದು ಪೂಜೆಗೊಳುತ
ಕಂಟಕ ಕಂಸಾದಿಗಳನೆ ದಂಟಿನಂತೆ ಸೀಳಿದವನ ॥ ಕಂಡು ॥

ಏಸು ಜನ್ಮದ ಸುಕೃತವೋ ಕಮಲೇಶ ವಿಠಲರಾಯ ತನ್ನ
ದಾಸಜನಾಭೀಷ್ಟವಿತ್ತು ಕೂಸಿನಂದದಿ ಪೋಷಿಸಿದವನ ॥ ಕಂಡು ॥

**ಪುರಂದರ -- ಕಂಡು ಕಂಡು ನೀ ಎನ್ನ ಕೈಬಿಡುವರೇ ಕೃಷ್ಣ**

ಕಂಡು ಕಂಡು ನೀ ಎನ್ನ ಕೈಬಿಡುವರೇ ಕೃಷ್ಣ
ಪುಂಡರೀಕಾಕ್ಷ ಶ್ರೀ ಪುರುಷೋತ್ತಮ । ಪ ।

ಬಂಧುಗಳು ಎನಗಿಲ್ಲ ಬದುಕಿನಲಿ ಸುಖವಿಲ್ಲ
ನಿಂದೆಯಲಿ ನೊಂದೇನೈ ನೀರಜಾಕ್ಷ
ತಂದೆತಾಯಿಯು ನೀನೇ ಬಂಧುಬಳಗವು ನೀನೆ
ಎಂದೆಂದಿಗೂ ನಿನ್ನ ನಂಬಿದೆನೋ ಶ್ರೀ ಕೃಷ್ಣ । ೧ ।

ಕ್ಷಣವೊಂದು ಯುಗವಾಗಿ ತೃಣಕಿಂತ ಕಡೆಯಾಗಿ
ಎಣಿಸಲಳವಲ್ಲ ಭವದ ವ್ಯಥೆಯಾ
ಸನಕಾದಿ ಮುನಿವಂದ್ಯ ವನಜಸಂಭವಜನಕ
ಫಣಿಶಾಯಿ ಪ್ರಹ್ಲಾದಗೊಲಿದ ನರಹರಿ ಕೃಷ್ಣ । ೨ ।

ಭಕ್ತವತ್ಸಲನೆಂಬ ಬಿರುದು ಹೊತ್ತಿಹ ಮೇಲೆ
ಭಕ್ತರಾಧೀನನಾಗಿ ಇರಬೇಡವೇ
ಮುಕ್ತಿದಾಯಕ ನೀನು ಹೊನ್ನೂರು ಪುರವಾಸ
ಶಕ್ತಗುರು ಪುರಂದರ ವಿಠಲ ನೀ ಎನ್ನ । ೩ । ॥ ಕ ॥

**ಶ್ರೀಪಾದರಾಯರು -- ಕಂಗಳಿದ್ಯಾತಕೋ**

ಕಂಗಳಿದ್ಯಾತಕೋ
ಕಾವೇರಿರಂಗನ ನೋಡದ
ಜಗಂಗಳೊಳಗೆ ಮಂಗಳಮೂರುತಿ
ರಂಗನ ಶ್ರೀಪಾದಂಗಳ ನೋಡದ ॥ ಪ ॥

ಎಂದಿಗಾದರೊಮ್ಮೆ ಜನರು
ಬಂದು ಭೂಮಿಯಲ್ಲಿ ನಿಂದು
ಚಂದ್ರಪುಷ್ಕರಣಿ ಸ್ನಾನವ ಮಾಡಿ
ಆನಂದದಿಂದಲಿ ರಂಗನ ಕಾಣದ ॥ ೧ ॥

ಹರಿಪಾದೋದಕ ಸಮ ಕಾವೇರಿ
ವಿರಜಾನದೀಲಿ ಸ್ನಾನವ ಮಾಡಿ
ಪರಮ ವೈಕುಂಠ ರಂಗಮಂದಿರ
ಪರ ವಾಸುದೇವನ ನೋಡದ ॥ ೨ ॥

ಹಾರ ಹೀರ ವೈಜಯಂತಿ
ತೋರ ಮುತ್ತಿನ ಹಾರ ಪದಕ
ತೇರನೇರಿ ಬೀದಿಲಿ ಬರುವ
ರಂಗವಿಠಲರಾಯನ ನೋಡದ ॥ ೩ ॥

**ಕಮಲೇಶ ವಿಠಲ (ಆನಂದದಾಸ) -- ಕರೆದರೆ ಬರಬಾರದೆ**

ಕರೆದರೆ ಬರಬಾರದೆ ಗುರುವೇ
ಕರೆದರೆ ಬರಬಾರದೆ । ಪ ।

ವರ ಮಂತ್ರಾಲಯ ಪುರಮಂದಿರದಲಿ
ಚರಣ ಸೇವಕರು ಕರವ ಮುಗಿದು ನಿನ್ನ । ೧ ।

ಹರಿದಾಸರು ಸುಸ್ವರ ಸಂವೇದದಿ
ಪರವಶದಲಿ ಬಾಯಿ ತೆರೆದು ಕೂಗಿ ನಿನ್ನ । ೨ ।

ಪೂಜರಪಿತ ಕಮಲೇಶ ವಿಠಲನ
ದಾಸಗ್ರೇಸರರು ಬಂದು ಕೂಗಿ ನಿನ್ನ । ೩ ।

**ಪುರಂದರ -- ಕರುಣಾಕರ**

ರಾಗ : ಧನ್ಯಾಸಿ, ತಾಳ : ಆದಿ

ಕರುಣಾಕರ ನೀನೆಂಬುವದೇತಕೋ ಭರವಸೆವಿಲ್ಲೆನಗೆ । ಪ ।
ಪರಿಪರಿಯಲಿ ನರಜನ್ಮವನಿತ್ತು
ತಿರುತಿರುಗಿ ಮನ ಕರಗಿಸುವದ ಕಂಡು । ಅ.ಪ ।

ಕರಿ ಧ್ರುವ ಬಲಿ ಪಾಂಚಾಲಿ ಅಹಲ್ಯೆಯ
ಪೊರೆದವ ಇಹದಲಿ ನೀನಂತೆ
ಅರಿತು ವಿಚಾರಿಸಿ ನೋಡಲದೆಲ್ಲವು
ಪರಿಪರಿ ಕಂತೆಗಳಂತಿದೆ ಕೃಷ್ಣ । ೧ ।

ಕರುಣಾಕರ ನೀನಾದರೆ ಈಗಲೆ
ಕರಪಿಡಿದೆನ್ನನು ನೀ ಸಲಹೋ
ಸರಸಿಜಾಕ್ಷ ಅರಸ ನೀನಾದರೆ
ದುರಿತಗಳೆನ್ನನು ಪೀಡಿಪುದುಂಟೆ । ೨ ।

ಮರಣಕಾಲದಲಿ ಅಜಮಿಳಗೊಲಿದೆ
ಗರುಡಧ್ವಜನೆಂಬ ನಾಮದಿಂದ
ವರಬಿರುದುಗಳು ಉಳಿಯಬೇಕಾದರೆ
ತ್ವರಿತದಿ ಕಾಯೋ ಶ್ರೀಪುರಂದರ ವಿಠಲ । ೩ ।

**ಪುರಂದರ -- ಕೇಳೋ ಸಚ್ಚರಿತ**

ಕೇಳೋ ಸಚ್ಚರಿತ, ಕೇಳೋ ಸಚ್ಚರಿತ । ಪ ।

ಧೃಡ ಭಕ್ತಿ ಇಂದಲಿ ಹರಿಯ ನೆನೆದರೆ
ಪಡುವ ಮೋಕ್ಷವೇ ಸಾಕ್ಷಿ
ಧೃಡ ಭಕ್ತಿ ಇಲ್ಲದೆ ಹರಿಯ ನೆನೆದರೆ

ಪಡುವ ನರಕವೇ ಸಾಕ್ಷಿ । ೧ ।

ಅನ್ನ ದಾನವ ಮಾಡಿದವರಿಗೆ
ಉಣ್ಣುವ ಊಟವೇ ಸಾಕ್ಷಿ
ಅನ್ನ ದಾನವ ಮಾಡದವರಿಗೆ
ಅನ್ನಕಳೆವುದೇ ಸಾಕ್ಷಿ । ೨ ।

ಪಂಕ್ತಿ ವಂಚನೆ ಮಾಡದವರಿಗೆ
ಪುತ್ರ ಲಾಭವೇ ಸಾಕ್ಷಿ
ಪಂಕ್ತಿ ವಂಚನೆ ಮಾಡಿದವರಿಗೆ
ಜನ್ಮ ರೋಗವೇ ಸಾಕ್ಷಿ । ೩ ।

ಕನ್ಯಾ ದಾನವ ಮಾಡಿದವರಿಗೆ
ಹೆಣ್ಣಿನ ಭೋಗವೇ ಸಾಕ್ಷಿ
ಕನ್ಯಾ ದಾನವ ಮಾಡದವರಿಗೆ
ಹೆಣ್ಣಿನ ಕಾಟವೇ ಸಾಕ್ಷಿ । ೪ ।

ಆಡಿದ ಮಾತಿಗೆ ಹರಿಯೇ ಸಾಕ್ಷಿ
ಮೂಡಿದ ಬಾವಿಗೆ ಜಲವೇ ಸಾಕ್ಷಿ
ಆಡದ ಮಾತಿಗೆ ಮನವೇ ಸಾಕ್ಷಿ
ಸಾಕ್ಷಿ ಪುರಂದರ ವಿಠಲನೇ ಸಾಕ್ಷಿ । ೫ ।

**ಪುರಂದರ –– ಕೃಷ್ಣಮೂರುತಿ ಕಣ್ಣ ಮುಂದೆ**
ರಾಗ : ಕಾಂಭೋದಿ

ಕೃಷ್ಣಮೂರುತಿ ಕಣ್ಣ ಮುಂದೆ ನಿಂತಿದಂತಿದೆ ॥ ಪ ॥

ಕಷ್ಟಗಳೆಲ್ಲವ ಪರಿಹರಿಸಿ
ಮನದಿಷ್ಟಾರ್ಥಗಳನೆಲ್ಲ ಕೊಟ್ಟು ಸಲಹುವಂತ । ಅ.ಪ ।

ಮಸ್ತಕದಲಿ ಮಾಣಿಕ್ಯದ ಕಿರೀಟ
ಕಸ್ತೂರಿ ತಿಲಕದಿ ಹೊಳೆವ ಲಲಾಟ

ಶಿಸ್ತಿನಲಿ ಕೊಳಲನೂದುವ ಓರೆ ನೋಟ
ಕೌಸ್ತುಭ ಎಡಬಲದಲಿ ಓಲಾಟ । ೧ ।

ಮಘಮಘಿಸುವ ಸೊಬಗಿನ ಸುಳಿಗೊರುಳು
ಚಿಗುರು ತುಲಸಿವನ ಮಾಲೆಯ ಕೊರಳು
ಬಗೆಬಗೆ ಹೊನ್ನ ಮುದ್ರಿಕೆ ಇಟ್ಟ ಬೆರಳು
ಸೊಬಗಿನ ನಾಭಿಯ ತಾವರೆ ಅರಳು । ೨ ।

ಉಡಿದಾರ ವಡ್ಯಾಣ ಸಕಲಾಭರಣ
ಬೆಡಗು ಪೀತಾಂಬರ ಶತರವಿಕಿರಣ
ಕಡಗ ನೂಪುರಗೆಜ್ಜೆಗಳನಿತ್ತ ಚರಣ
ಒಡೆಯ ಪುರಂದರ ವಿಠಲನ ಕರುಣ । ೩ ।

**ಗೋಪಾಲ ದಾಸ -- ಕೃಷ್ಣನ ನೋಡಿದೆ ಸರ್ವೋತ್ಕೃಷ್ಟನ ಪಾಡಿದೆ**

ಕೃಷ್ಣನ ನೋಡಿದೆ ಸರ್ವೋತ್ಕೃಷ್ಟನ ಪಾಡಿದೆ
ಕೃಷ್ಣನ ನೋಡಿ ಸಾಷ್ಟಾಂಗವ ಮಾಡಿದೆ
ಕಷ್ಟವ ಪರಿಹರಿಸಿ ಇಷ್ಟವ ನೀವನ
ಕೃಷ್ಣನ ನೋಡಿದೆ ಕೃಷ್ಣನ ಪಾಡಿದೆ । ೧ ।

ಶಿಷ್ಟನ ನೋಡಿದೆ ವರನಿರ್ದಿಷ್ಟನ ನೋಡಿದೆ
ಹೃಷ್ಟ ಪುಷ್ಟ ಸಂತುಷ್ಟನ ಶ್ರೇಷ್ಟನ
ಶಿಷ್ಟರ ಹೃದಯ ಸಮ್ಮಿಷ್ಟನ ಇಷ್ಟನ
ಕೃಷ್ಣನ ನೋಡಿದೆ ಕೃಷ್ಣನ ಪಾಡಿದೆ । ೨ ।

ರಂಗನ ನೋಡಿದೆ ದೇವೋತ್ತುಂಗನ ನೋಡಿದೆ
ರಂಗ ಸಿಂಗ ಕಾಳಿಂಗ ಮರ್ದನ
ಮಂಗಳಾಂಗ ಭವ ಭಂಗನ ನೋಡಿದೆ
ಕೃಷ್ಣನ ನೋಡಿದೆ ಕೃಷ್ಣನ ಪಾಡಿದೆ । ೩ ।

ಬಾಲನ ನೋಡಿದೆ ಲಕುಮೀಲೋಲನ ನೋಡಿದೆ
ಶೀಲ ಶೂಲಧರ ಪಾಲ ಲೀಲ

ಶಿಶುಪಾಲ ಕಾಲ ವನಮಾಲನ ನೋಡಿದೆ
ಕೃಷ್ಣನ ನೋಡಿದೆ ಕೃಷ್ಣನ ಪಾಡಿದೆ । ೪ ।

ಧೀರನ ನೋಡಿದೆ ಗುಣಗಂಭೀರನ ನೋಡಿದೆ
ವೀರ ಶೂರ ಪರಾತ್ಪರ ವರ
ಅಕ್ರೂರ ವರದ ಸಿರಿಧರನ ನೋಡಿದೆ
ಕೃಷ್ಣನ ನೋಡಿದೆ ಕೃಷ್ಣನ ಪಾಡಿದೆ । ೫ ।

ಶಾಮನ ನೋಡಿದೆ ಬಲುನಿಸ್ಸೀಮನ ನೋಡಿದೆ
ವಾಮನ ಭಾಮನ ಕಾಮನಯ್ಯನ
ಶಾಮನ ಸೀಮನ ಸೋಮನ ನೋಡಿದೆ
ಕೃಷ್ಣನ ನೋಡಿದೆ ಕೃಷ್ಣನ ಪಾಡಿದೆ । ೬ ।

ಜಾಣನ ನೋಡಿದೆ ಬಲುಪ್ರವೀಣನ ನೋಡಿದೆ
ಪ್ರಾಣನ ಪ್ರಾಣನ ಗುಣಗಣ ಮಂಡಿತ
ವೇಣುಗೋಪಾಲ ವಿಠಲ ಕಲ್ಯಾಣನ
ಕೃಷ್ಣನ ನೋಡಿದೆ ಕೃಷ್ಣನ ಪಾಡಿದೆ । ೭ ।

**ಪುರಂದರ -- ಲಾಲಿಸಿದಳು ಮಗನ ಯಶೋದೆ**

ಲಾಲಿಸಿದಳು ಮಗನ ಯಶೊದೆ
ಲಾಲಿಸಿದಳು ಮಗನ । ಪ ।

ಅರಳೆಲೆ ಮಾಂಗಾಯಿ ಬೆರಳಿಗುಂಗುರವಿಟ್ಟು
ತರಳನ ಮೈಸಿರಿ ತರುಣಿ ನೋಡುತೆ ಹಿಗ್ಗಿ । ೧ ।

ಬಾಲಕನ ಕೆನೆವಾಲ ಮೊಸರನೀವೆ
ಲೀಲೆಯಿಂದಲಿ ಎನ್ನ ತೋಳ್ಮೇಲ್ಮಲಗೆಂದು । ೨ ।

ಮುಗುಳುನಗೆಯಿಂದ ಮುದ್ದು ತಾತಾರೆಂದು
ಜಗದೊಡೆಯನ ಶ್ರೀ ಪುರಂದರ ವಿಠಲನ

**ಪುರಂದರ ದಾಸರು -- ಲಂಗೋಟಿ ಬಲು ಒಳ್ಳೇದಣ್ಣ**

ಲಂಗೋಟಿ ಬಲು ಒಳ್ಳೇದಣ್ಣ
ಒಬ್ರ ಹಂಗಿಲ್ಲದೇ ಮಡಿಗೆ ಒದಗುವುದಣ್ಣ । ಪ ।

ಬಡವರಿಗಾಧಾರವಣ್ಣ ಈ ಲಂಗೋಟಿ
ಬೈರಾಗಿಗಳ ಭಾಗ್ಯವಣ್ಣ
ಕಡುಕಳ್ಳರಿಗೆ ಗಂಡ ಮಾಡಿಸುತ್ತಗಳ ಮಿಂಡ
ನಡುಗುವ ಸಮಯಕ್ಕೆ ಮಡಿಗೆ ಒದಗುವಂಥ । ೧ ।

ಜಿತ ಮನ ಸನ್ಯಾಸಿಗಳಿಗಿದೆ ಕೌಪೀನ
ವ್ರತವುಳ್ಳ ಬ್ರಹ್ಮಚಾರಿಗೆ ಮುಖ್ಯವು
ಅತಿಶಯವಿದೆ ಆಂಜನೇಯ ನಾರದರಿಗೆ
ಗತಿಯಿಲ್ಲದವರಿಗೆ ಮಿತವಾಗಿ ಇರುವಂಥ । ೨ ।

ಮಡಿವಾಳರಿಗೆ ಶತ್ರು ಮಠದಯ್ಯಗಳ ಮಿತ್ರ
ಪೊಡವಿಯೊಳ್ ಯಾಚಕರಿಗೆ ನೆರವು
ಧೃಢ ಭಕ್ತ ಬಲಿಚಕ್ರವರ್ತಿಗಾಗಿ ನಮ್ಮ
ಒಡೆಯ ಶ್ರೀ ಪುರಂದರ ವಿಠಲ ಧರಿಸಿದಂಥ । ೩ ।

**ಪುರಂದರ -- ಮೋಸಹೋದೆನಲ್ಲೋ ನಾನು ಮೋಸಹೋದೆನಲ್ಲೋ**
ರಾಗ: ಶುಭ ಪಂತುವರಾಳಿ ತಾಳ: ಆದಿ

ಮೋಸಹೋದೆನಲ್ಲೋ ನಾನು ಮೋಸಹೋದೆನಲ್ಲೋ । ಮೋಸ ।

ಶೇಷ ಶಯನನಿಗೆ ಸೇವಕನಾಗದೆ
ವಾಸುದೇವನಿಗೆ ದಾಸನಾಗದೆ । ಮೋಸ ।

ಮಲ್ಲಿಗೆ ಮುಲ್ಲೆ ಮರುಗದವನ ತಂದು
ಫುಲ್ಲಜಾಕ್ಷನ ಪೂಜೆಯ ಮಾಡದ
ಯೌವನದಲಿ ಶ್ರಿ ಹರಿ ಪಾದ ನಂಬದೆ
ಮೂವತ್ತು ವರುಷ ಮೋಹಾಬ್ಧಿಯಲ್ಲಿ ಬಿದ್ದು । ಮೋಸ ।

ಸತ್ಯಭಾಮೆಯರಸನ ಕೊಂಡಾಡದೆ
ಮೃತ್ಯುಪದರ ದೀಪ್ತಿಗೇ ಉರಿಯಾಗಿ
ಲಜ್ಜೆ ಬಿಟ್ಟು ನಾ ಗೆಜ್ಜೆ ಕಟ್ಟಿಕೊಂಡು
ಸಜ್ಜನರೊಂದಿಗೆ ಸರ್ವತ್ರ ಕುಣಿಯದೆ । ಮೋಸ ।

ಸುರವರ ತರುವಾದಿ ಸುಸ್ಥಿರವಾದಂತ
ಪುರಂದರ ವಿಠಲನ ಚರಣವ ಪಿಡಿಯದೆ । ಮೋಸ ।

**ಪುರಂದರ -- ಮಾಡು ಸಿಕ್ಕದಲ್ಲ**
ರಾಗ : ಪಂತುರಾವಳಿ, ತಾಳ : ಆದಿ

ಮಾಡು ಸಿಕ್ಕದಲ್ಲ
ಮಾಡಿನ ಗೂಡು ಸಿಕ್ಕದಲ್ಲ
ಜೋಡು ಹೆಂಡಿರಿಗಂಜಿ ಓಡಿ ಹೋಗುವಾಗ
ಗೋಡೆ ಬಿದ್ದು ಬಯಲಾಯಿತೆಲ್ಲ । ಪ ।

ಎಚ್ಚರ ಗೊಳಲಿಲ್ಲ ಮನವೆ
ಹುಚ್ಚನಾದೆನಲ್ಲ
ಅಚ್ಚಿನೊಳಗೆ ಮೆಚ್ಚು
ಮೆಚ್ಚಿನೊಳಗೆ ಅಚ್ಚು, ಕಿಚ್ಚೆದ್ದು ಹೊಯಿತೆಲ್ಲ । ೧ ।

ಮುಪ್ಪು ಬಂದಿತಲ್ಲ ಪಾಯಸ
ತಪ್ಪದೆ ಉಣಲಿಲ್ಲ
ತುಪ್ಪದ ಬಿಂದಿಗೆ ತಿಪ್ಪೆ ಮೇಲೆ
ದೊಪ್ಪನೆ ಬಿತ್ತಲ್ಲ । ೨ ।

ಯೋಗವು ಬಂತಲ್ಲ ಬದುಕು ವಿ-
-ಭಗ ವಾಯಿತೆಲ್ಲ
ಭೋಗಿ ಶಯನ ಶ್ರೀ ಪುರಂದರವಿಠಲನ
ಆಗ ನೆನೆಯಲಿಲ್ಲ । ೩ ।

**ಪುರಂದರ ದಾಸ -- ಮಂದ ಮತಿಯು ನಾನು**

ಮಂದ ಮತಿಯು ನಾನು
ಮದನ ಜನಕನು ನೀನು
ಕುಂದುಗಳ ಎಣಿಸದೆ ದಯಮಾಡಿ ಸಲಹೊ । ಪ ।

ಪಾಪ ಕರ್ತನು ನಾನು ಪಾಪ ನಾಶನು ನೀನು
ಕೋಪ ಮಧ ಮತ್ಸರದಿ ತುಡಿವೆ ನಾನು
ತಾಪವನು ತರಿದು ನಿರ್ಭಯವ ಮಾಡುವೆ ನೀನು
ರೂಪ ಚಯಕೆ ಮರುಳುಗೊಂಬೆನೊ ನಾನು । ೧ ।

ಮಂದ ಭಾಗ್ಯನು ನಾನು ಇಂದಿರಾ ಪತಿ ನೀನು
ಹಿಂದು ಮುಂದಿನ ಸುದ್ದಿ ಅರಿಯದವ ನಾನು
ತಂದೆ ಶ್ರೀ ಪುರಂದರ ವಿಠಲ ರಾಯನೇ
ಎಂದೆಂದು ಭಕ್ತರನು ಸಲಹುವೆಯೊ ನೀನು । ೨ ।

**ಪುರಂದರ -- ಮೂರುತಿಯನೆ**

ಮೂರುತಿಯನೆ ನಿಲ್ಲಿಸೊ
ಮಾಧವ ನಿನ್ನ । ಪ ।

ಎನ್ನ ಹೃದಯಕಮಲದೊಳು
ಒದಗಿ ನೆನೆಯುವಂತೆ ನಿನ್ನ । ಅ.ಪ ।

ಎಳೆ ತುಳಸಿಯ ವನಮಾಲೆಯು ಕೊರಳೊಳು
ಹೊಳೆವ ಪೀತಾಂಬರ ಉಡಿಯೊಳುಪ್ಪುವ ನಿನ್ನ । ೧ ।

ಮುತ್ತಿನಹಾರ ನವರತ್ನದುಂಗುರ ಬೆರಳೊಳು
ಮತ್ತೆ ಶ್ರೀಲಕುಮಿಯು ಉರದೊಳೊಪ್ಪುವ ನಿನ್ನ । ೨ ।

ಭಕ್ತರ ಕಾಮಧೇನು ಕಲ್ಪತರುವೆಂಬ
ಭಕ್ತವತ್ಸಲ ಸಿರಿ ಪುರಂದರವಿಠಲನೆ ನಿನ್ನ । ೩ ।

**ಪುರಂದರ -- ನಾ ನಿನ್ನ ಧ್ಯಾನದೊಳು**

ನಾ ನಿನ್ನ ಧ್ಯಾನದೊಳಿರಲು ಸದಾ ಮಿಕ್ಕ
ಮಾನವರೇನು ಮಾಡುವರೋ ರಂಗ । ಪ ।

ಮತ್ಸರಿಸುವರೆಲ್ಲ ಕೂಡಿ ಮಡುವದೇನು
ಅಚ್ಯುತ ನಿನ್ನದೊಂದು ದಯೆಯಿರಲು
ವಾತ್ಸಲ್ಯ ಬಿಡದಿರು ನಿನ್ನ ನಂಬಿದೆ ದೇವ
ಕಿಚ್ಚಿಗೆ ಇರುವೆ ಮುತ್ತುವದೆ ಹೇಳೆಲೇ ರಂಗ । ೧ ।

ಧೂಳಲಿ ಕುದುರೆ ವೈಯಾರದಿ ಕುಣಿಯಲು
ಧೂಳು ರವಿಯ ಮೇಲೆ ಮುಸುಕುವದೆ
ತಾಳಿದವರಿಗೆ ವಿರುದ್ಧ ಲೋಕದೊಳುಂಟೆ
ಗಾಳಿಗೆ ಗಿರಿಯು ಅಲ್ಲಾಡಬಹುದೆ ರಂಗ । ೨ ।

ಕನ್ನಡಿಯೊಳಗಿನ ಗಂಟು ಕಂಡು ಕಳ್ಳ
ಕನ್ನವಿಕ್ಕಲವನ ವಶವಾಹುದೆ
ನಿನ್ನ ನಂಬಲು ಮುದ್ದು ಪುರಂದರವಿಠಲ
ಚಿನ್ನಕ್ಕೆ ಪುಟವನಿಟ್ಟಂತೆ ಅಹುದೋ ರಂಗ । ೩ ।

**ನಗೆಯು ಬರುತಿದೆ ಎನಗೆ ನಗೆಯು ಬರುತಿದೆ -- ಪುರಂದರ**
ರಾಗ: ಪಂತುರಾವಳಿ, ತಾಳ : ಏಕ

ನಗೆಯು ಬರುತಿದೆ ಎನಗೆ ನಗೆಯು ಬರುತಿದೆ ॥ ಪ ॥
ಜಗದೊಳಿರುವ ಮನುಜರೆಲ್ಲ
ಹಗರಣ ಮಾಡುವದ ಕಂಡು ।ಅ.ಪ।

ಪರರ ವನಿತೆ ಒಲುಮೆಗೊಲಿದು
ಹರ್ಷದಿಂದ ಅವಳ ಬೆರೆತು
ಹರಿವ ನೀರಿನೊಳಗೆ ಮುಳುಗಿ
ಬೆರಳ ಎಣಿಸುತಿಹರ ಕಂಡು । ೧ ।

ಪತಿಯ ಸೇವೆಯ ಬಿಟ್ಟು
ಪರಪತಿಯ ಕೂಡಿ ಸತತ
ಮೈಯ ತೊಳೆದು ಹಲವು
ವ್ರತವ ಮಾಡ್ಪ ಸತಿಯ ಕಂಡು । ೨ ।

ಹೀನಗುಣವ ಮನದೊಳಿಟ್ಟು
ತಾನು ವಿಷದ ಹುಂಜನಾಗಿ
ಸ್ವಾಮಿ ಪುರಂದರ ವಿಠಲನ
ನಾಮ ನೆನೆಯುವರ ಕಂಡು । ೩ ।

**ಕನಕ ದಾಸರು -- ಗಣನಾಥ**

ನಮ್ಮಮ್ಮ ಶಾರದೆ ಉಮಾಮಹೇಶ್ವರಿ
ನಿಮ್ಮೊಳಗಿಹನಾರಮ್ಮ । ಪ ।
ಕಮ್ಮಗೋಲನ ವೈರಿ ಸುತನಾದ ಸೊಂಡಿಲ
ಹೆಮ್ಮೆಯ ಗಣನಾಥನೆ ।ಅ.ಪ।

ಮೋರೆ ಕಪ್ಪಿನ ಭಾವ ಮೊರದಗಲದ ಕಿವಿ
ಕೋರೆ ದಾಡೆಯನಾರಮ್ಮ
ಮೂರುಕಣ್ಣನ ಸುತ ಮುರಿದಿಟ್ಟ ಚಂದ್ರನ
ಧೀರ ತಾ ಗಣನಾಥನೆ ॥ ೧ ॥

ಉಟ್ಟದಟ್ಟಿಯು ಬಿಗಿದುಟ್ಟ ಚೆಲ್ಲಣದ
ದಿಟ್ಟ ತಾನಿವನಾರಮ್ಮ
ಪಟ್ಟದ ರಾಣಿ ಪಾರ್ವತಿಯ ಕುಮಾರನು
ಹೊಟ್ಟೆಯ ಗಣನಾಥನೆ ॥ ೨ ॥

ರಾಶಿವಿದ್ಯೆಯ ಬಲ್ಲ ರಮಣೀ ಹಂಬಲನೊಲ್ಲ
ಭಾಶಿಗನಿವನಾರಮ್ಮ
ಲೇಸಾಗಿ ಜನರ ಸಲಹುವ ಕಾಗಿನೆಲೆಯಾದಿ
ಕೇಶವದಾಸ ಕಾಣೆ ॥ ೩॥

**ಕನಕ ದಾಸ -- ನನ್ನಿಂದ ನಾನೇ**

ನನ್ನಿಂದ ನಾನೇ ಜನಿಸಿ ಬಂದೆನೆ ಕೃಷ್ಣ ?
ಎನ್ನ ಸ್ವತಂತ್ರವು ಲೇಶವಿದ್ದರೂ ತೋರೋ । ಪ ।

ಕಂದನ ಆಡಿಸುತ್ತಿರೆ ತಾಯಿ
ಕಂದ ಬಾವಿಯ ಅಂಚಿಗೆ ಹೋಗುತ್ತಿರೆ
ಬಂದು ಬೇಗನೆ ಬಿಗಿದಪ್ಪದಿರಲು
ಆ ಕಂದನ ತಪ್ಪೋ ? ಮಾತೆಯ ತಪ್ಪೋ ? ಪರಮಾತ್ಮಾ ॥ ೧ ॥

ದೂರು ನಿನ್ನದು ದಾರಿ ನಿನ್ನದು ರಂಗ
ನಾರೀ ಮಕ್ಕಳ ತನು ಮನ ನಿನ್ನದಯ್ಯ ॥ ೨ ॥

ನ್ಯಾಯವಾದರೆ ದುಡುಕು ನಿನ್ನದೋ ರಂಗ
ಮತ್ತನ್ಯಾಯವಾದರೆ ಪೇಳುವರಾರೋ ॥ ೩ ॥

ಮಾಯಾರಹಿತ ಕಾಗಿನೆಲೆಯಾದಿ ಕೇಶವ
ಕಾಯಯ್ಯ ಎನ್ನನು ಮರೆಯದೆ ವಿಠಲಯ್ಯ ॥ ೪ ॥

**ಕನಕದಾಸರು -- ನೀ ಮಾಯೆಯೊಳಗೊ, ನಿನ್ನೊಳು ಮಾಯೆಯೊ**

ನೀ ಮಾಯೆಯೊಳಗೊ, ನಿನ್ನೊಳು ಮಾಯೆಯೊ
ನೀ ದೇಹದೊಳಗೊ, ನಿನ್ನೊಳು ದೇಹವೊ? । ಪ ।

ಬಯಲು ಆಲಯದೊಳಗೋ, ಆಲಯವು ಬಯಲೊಳಗೋ
ಬಯಲು ಆಲಯವೆರಡು ನನ್ನಯನದೊಳಗೋ
ನಯನ ಬುದ್ಧಿಯ ಒಳಗೊ, ಬುದ್ಧಿ ನಯನದೊಳಗೋ
ನಯನ ಬುದ್ಧಿಗಳೆರಡು ನಿನ್ನೊಳಗೋ, ಕೃಷ್ಣ । ೧ ।

ಸವಿಯು ಸಕ್ಕರೆಯೊಳಗೋ, ಸಕ್ಕರೆಯು ಸವಿಯೊಳಗೋ
ಸವಿಯು ಸಕ್ಕರೆಯರಡು ಜಿಹ್ವೆಯೊಳಗೋ
ಜಿಹ್ವೆ ಮನಸಿನೊಳಗೋ, ಮನಸು ಜಿಹ್ವೆಯ ಒಳಗೋ

ಮನಸು ಜಿಹ್ವೆಗಳೆರಡು ನಿನ್ನೊಳಗೋ, ಕೃಷ್ಣ । ೨ ।

ಕುಸುಮದಲಿ ಗಂಧವೋ, ಗಂಧದಲಿ ಕುಸುಮವೋ
ಕುಸುಮ ಗಂಧಗಳೆರಡು, ಆಘ್ರಾಣದೊಳಗೋ
ಅಸಂಭವ ಕಾಗಿನೆಲೆಯಾದಿ ಕೇಶವರಾಯ
ಉಸುಲಎನ್ನಳವಲ್ಲ ಎಲ್ಲ ನಿನ್ನೊಳಗೋ, ಕೃಷ್ಣ । ೩ ।

**ಪುರಂದರ -- ಒಲ್ಲನೋ ಹರಿ ತುಳಸಿ ಇಲ್ಲದ ಪೂಜೆ**

ರಾಗ : ಸಹನ ತಾಳ: ಆದಿ

ಒಲ್ಲನೊ ಹರಿ ಕೊಳ್ಳನೊ
ಎಲ್ಲಾ ಸಾಧನವಿದ್ದು ತುಳಸಿ ಇಲ್ಲದ ಪೂಜೆ ॥ ಪ ॥

ಸಿಂಧು ಶತ ಕೋಟಿ ಗಂಗೋದಕವಿದ್ದು
ಗಂಧದ ಪರಿಮಳ ವಾಸ ವಿದ್ದು
ಚಂದುಳ್ಳ ಆಭರಣ ಧೂಪ ದೀಪವಿದ್ದು
ಬೃಂದಾವನ ಶ್ರೀ ತುಳಸಿ ಇಲ್ಲದ ಪೂಜೆ । ಒಲ್ಲನೊ ।

ಪೂಜೆಯ ಮಾಡದೆ ತುಳಸಿ ಮಂಜರಿ ಇಂದ
ಮೂಜಗದೊಡೆಯ ಮುರಾರಿಯನ್ನು
ರಾಜಾದಿರಾಜನೆಂಬೊ ಮಂತ್ರ ಪುಷ್ಪಗಳಿಂದ
ಪೂಜಿಸಿದರೂ ಒಲ್ಲ ಪುರಂದರ ವಿಠಲ । ಒಲ್ಲನೊ ।

**ಶ್ರೀ ಪಾದ ರಾಯರು -- ಪೋಪು ಹೊಗೋಣ ಬಾರೊ**

ಉಗಾಭೋಗ -----

ಕಸ್ತೂರಿ ತಿಲಕವ ಶಿಸ್ತಾಗಿ ಹಣೆಯೊಳಿಟ್ಟು
ಮಸ್ತಕದಲಿ ಪರವಸ್ತುವ ತೋರಿ
ಗೆಜ್ಜೆಯ ಕಟ್ಟಿ ತಪ್ಪೆಜ್ಜೆಯನಿಕ್ಕುತ ಬಾರೋ
ರಂಗಯ್ಯ ರಂಗ ಭವಭಂಗವ ಪರಿಹರಿಸೋ
ರಂಗ ವಿಠಲ ಬಾರೊ

ಕೃತಿ
ಮೋಹನ
ಪೋಪು ಹೋಗೋಣ ಬಾರೋ
ರಂಗಯ್ಯ ರಂಗ ಪೋಪು ಹೋಗೋಣ ಬಾರೋ
ಜಾಹ್ನವಿಯ ತೀರವಂತೆ ಜನಕ ರಾಜನ ಕುವರಿಯಂತೆ
ಜಾನಕಿಯ ಸ್ವಯಂವರವಂತೆ ಜಾಣ ನೀ ಬರಬೇಕಂತೆ ॥ ಪೋಪು ॥

(ಕಾನಡ)
ಕುಂಡಲಿಯ ನಗರವಂತೆ ಭೀಷ್ಮಕನ ಕುವರಿಯಂತೆ
ಶಿಶುಪಾಲನ ಒಲ್ಲಳಂತೆ ನಿನಗೆ ಓಲೆ ಬರೆದಳಂತೆ ॥ ಪೋಪು ॥

(ವರಾಳಿ)
ಪಾಂಡವರು ಕೌರವರಿಗೆ ನೆತ್ತವಾಡಿ ಸೋತರಂತೆ
ರಾಜ್ಯವನ್ನು ಬಿಡಬೇಕಂತೆ ರಂಗ ವಿಠಲ ಬರಬೇಕಂತೆ ॥ ಪೋಪು ॥

**ಪುರಂದರ –– ರಾಗಿ ತಂದೀರಾ**

ರಾಗಿ ತಂದೀರಾ ಭಿಕ್ಷಕೆ ರಾಗಿ ತಂದೀರಾ
ಯೋಗ್ಯರಾಗಿ ಭೋಗ್ಯರಾಗಿ
ಭಾಗ್ಯವಂತರಾಗಿ ನೀವು ॥ ರಾಗಿ ॥

ಅನ್ನದಾನವ ಮಾಡುವರಾಗಿ
ಅನ್ನ ಛತ್ರವ ನಿತ್ತವರಾಗಿ
ಅನ್ಯ ವಾರ್ತೆಗಳ ಬಿತ್ತವರಾಗಿ
ಅನುದಿನ ಭಜನೆಯ ಮಾಡುವರಾಗಿ ॥ ರಾಗಿ ॥

ಮಾತಾ ಪಿತರ ಸೇವಿತರಾಗಿ
ಪಾತಕ ಕಾರ್ಯವ ಬಿತ್ತವರಾಗಿ
ಖ್ಯಾತಿಯಲಿ ಮಿಗಿಲಾದವರಾಗಿ
ನೀತಿ ಮಾರ್ಗದಲಿ ಖ್ಯಾತರಾಗಿ ॥ ರಾಗಿ ॥

ಶ್ರೀರಮಣನ ಸದಾ ಸ್ಮರಿಸುವರಾಗಿ
ಗುರುವಿಗೆ ಬಾಗುವಂಥವರಾಗಿ
ಕರೆ ಕರೆ ಸಂಸಾರ ನೇಗುವರಾಗಿ
ಪುರಂದರ ವಿಠಲನ ಸೇವಿತರಾಗಿ ॥ ರಾಗಿ ॥

**ಪುರಂದರ -- ರಾಮನಾಮ**
ಆನಂದ ಭೈರವಿ

ರಾಮ ನಾಮ ಪಾಯಸಕ್ಕೆ
ಕೃಷ್ಣ ನಾಮ ಸಕ್ಕರೆ
ವಿಠಲ ನಾಮ ತುಪ್ಪವ
ಕಲಸಿ ಬಾಯ ಚಪ್ಪರಿಸಿರೋ ॥ ಪ ॥

ಒಮ್ಮಾನ ಗೋಧಿಯ ತಂದು
ವೈರಾಗ್ಯ ಕಲ್ಲಲಿ ಬೀಸಿ
ಸುಮ್ಮಾನೆ ಸಜ್ಜಿಗೆ ತೆಗೆದು
ಗಮ್ಮಾನ ಶಾವಿಗೆ ಹೊಸೆದು ॥ ರಾಮ ॥

ಹೃದಯವೆಂಬೋ ಮಡಿಕೆಯಲಿ
ಭಾವವೆಂಬೋ ಹೆಸರಲಿ
ಬುದ್ಧೀ ಇಂದ ಪಾಕಮಾಡಿ
ಹರಿವಾಣಕೆ ಬಡಿಸೀಕೊಂಡು ॥ ರಾಮ ॥

ಆನಂದ, ಆನಂದವೆಂಬೋ ತೇಂಗು
ಬಂದಿದು ಕಾಣಿರೋ
ಆನಂದ ಮೂರುತಿ ನಮ್ಮ ಪುರಂದರ
ವಿಠಲನ ನೆನೆಯಿರೋ ॥ ರಾಮ ॥

**ಕನಕ ದಾಸರು -- ರಾಮನೆಂತ ಚೆಲುವನಮ್ಮ**
ರಾಗ : ಶಂಕರಾಭರಣ ತಾಳ : ಆದಿ ಽ ಮಿಶ್ರ ಚಾಪು

ರಾಮನೆಂತ ಚೆಲುವನಮ್ಮ

ಸೀತಾ ರಾಮನೆಂತ ಚೆಲುವನಮ್ಮ ॥ ಪ ॥

ರಾಮನೆಂತ ಚೆಲುವನಮ್ಮ
ರಾಮ ಜಗದಭಿ ರಾಮ
ದುರಿತವಿರಾಮ ಸದ್ಗುಣಧಾಮ
ತಾರಕ ನಾಮ ಮೇಘಶ್ಯಾಮ ಶ್ರೀ ರಘು ॥ ರಾಮನೆಂತ ॥

(ಮಿಶ್ರ ಚಾಪು)
ನೀಲ ಮಣಿಗಳು ಸಾಲ ಕುಂತಲ
ಜಾಲ ನೋತವು ಬಾಲ ಚಂದ್ರನ
ಪೋಲುತಿರುವುದು ಹಾಲಭಾಗ ವಿಶಾಲ ಕಮಲಾಕ್ಷಿ

(ಆದಿ)
ಧೂಳಳತೆಯಿಂದ ಕಾರ್ಮುಖವು
ಹೋಗೆ ಕಂಗಳ ಡಾಳಗಳು
ಪುಂಡರೀಕವು ತೂಮಕಮಲ
ಕಪೋಲ ಚಂಪಕ ನಾಸಿಕವು
ಸೋಲಿಸುವಿದರಂದನಂಗಲ ಚಂದವು
ಲಾಲಿಪ ಚೆಂದುಟಿ ನವ ಕುರುವಿಂದವು
ಮೇಲಗೆ ನುಡಿಯಲು ವರಮೊಗೆಯಂದವು
ಬಾಲಕಿ ನಸುನಗೆ ಪುಗುತರಮಮ್ ॥ ರಾಮನೆಂತ ॥

**ಪುರಂದರ ದಾಸ -- ರಂಗ ಕೊಳಲನೂದಲಾಗಿ**

ರಂಗ ಕೊಳಲನೂದಲಾಗಿ ಮಂಗಳಮಯವಾಯ್ತು ಧರೆ
ಜಗಂಗಳು ಚೈತನ್ಯ ಮರೆತು ಅಂಗ ಪರವಶವಾದುವು ॥ ಪ ॥

ತೀಡಿದ ಮಾರುತ ಮಂದಮತಿಗ್ಯೆಯೆ ಬಾಡಿದ ಬರಲು ಫಲಗೊಂಚಲು ಬಿಡೆ
ಪಾಡಲೊಲ್ಲವು ಅಳಿಕುಲಂಗಳು ಬಾಡಿದ ಮಾಮರ ಚಿಗುರೊಡೆಯ
ಹೇಡಿಗೊಂಡವು ಜಾಣಕ್ಕಿ ಗಿಳಿ ಮಾತಾಡದೆ ಕಾಲೆಗುಂದಿದವು ಕೋಗಿಲೆ
ಓಡಾಟ ವೈರವ ಬಿಟ್ಟು ಖಗಮೃಗ ಗಾಢ ನಿದ್ರಾವಶವಾದುವು ॥ ೧ ॥

ನಾಳಿನ ಚಂಪಕ ನಾಗ ಪುನ್ನಾಗ ಪಾಟಿಲ ಶಾವಂತಿಗೆ ಕುಂದ ಬಕುಳವು
ಮಾಲತಿ ಜಾಜಿ ಪರಿಮಳಗೊಂಡಿತು ನೀಲಾಂಗನಂಘ್ರಿಗೆ ಎರಗಿದವು
ದಾಮ ವನಮಾಲಿ ಶೀವತ್ಸ ಕೌಸ್ತುಭ ಸ್ವಾಮಿ ಪುರಂದರ ವಿಠಲ ರಾಯನೌ
ನಾಮ ಕ್ರಿಯೇ ಮೇಘ ರಂಜಿನಿ ಪಾಡೇ ಸಮ ವೇದನಮು ನವೋ ಎನ್ನೇ ॥ ೨ ॥

**ಪುರಂದರ -- ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ**

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮತಿ ಪ್ರೇರಿಸುವಳು ಪಾರ್ವತೀ ದೇವಿ ॥ ಪ ॥

ಮುಕುತಿ ಪಥಕೆ ಮನವೀವ ಮಹಾರುದ್ರ ದೇವರು
ಹರಿ ಭಕುತಿ ದಾಯಕಳು ಭಾರತೀ ದೇವಿ
ಯುಕುತಿ ಶಾಸ್ತ್ರಗಳಲ್ಲಿ ವನಜಸಂಭವನರಸಿ
ಸತ್ಕರ್ಮಗಳ ನಡೆಸಿ ಸುಜ್ಞಾನ ಮತಿ ಇತ್ತು ॥ ೧ ॥

ಗತಿ ಪಾಲಿಸುವ ನಮ್ಮ ಪವಮಾನನು
ಚಿತ್ತದಲಿ ಆನಂದ ಸುಖವನೀವಳು ರಮಾ
ಭಕ್ತಜನರೊಡೆಯ ನಮ್ಮ ಪುರಂದರ ವಿಠಲನು
ಸತತ ಇವರಲಿ ನಿಂತು ಈ ಕೃತಿಯ ನಡೆಸುವನು ॥ ೨ ॥

**ಪುರಂದರ -- ಶರಣು ಸಿದ್ಧಿ ವಿನಾಯಕ ಶರಣು ವಿದ್ಯಾ**

ಶರಣು ಸಿದ್ಧಿ ವಿನಾಯಕ ಶರಣು ವಿದ್ಯ ಪ್ರದಾಯಕ
ಶರಣು ಪಾರ್ವತಿ ತನಯ ಮೂರುತಿ ಶರಣು ಮೂಶಿಕ ವಾಹನ ॥ ಪ ॥

ನಿಖಿಲ ನೇತ್ರನೆ ದೇವಿ ಸುತನೆ ನಾಗಭೂಷಣ ಪ್ರಿಯನೇ
ತಟಿ ತಟಾಂಕಿತ ಕೋಮಲಾಂಗನೆ ಕರ್ಣಕುಂಡಲ ಧಾರನೆ ॥ ಶ ॥

ಪಟ್ಟ ಮುತ್ತಿನ ಪದಕ ಹಾರನೆ ಬಾಹು ಬಂಧ ಚತುಷ್ಟನೆ
ಇಟ್ಟ ತೊಡುಗೆಯ ಹೇಮ ಕಂಕಣ ಪಾಶ ಅಂಕುಶ ಧಾರನೆ ॥ ಶ ॥

ಕುಕ್ಷಿ ಮಹಾ ಲಂಭೋದರನೆ ಇಕ್ಷುಚಾಪನ ಗೆಲಿದನೆ
ಪಕ್ಷಿ ವಾಹನನಾದ ಸಿರಿ ಪುರಂದರ ವಿಠಲನ ನಿಜ ದಾಸನೆ ॥ ೮ ॥

**ಪುರಂದರ -- ಶ್ರೀಕಾಂತ ಎನಗಿಷ್ಟು ದಯ ಮಾಡೋ**
ರಾಗ : ಖಾನಡ ತಾಳ : ಮಿಶ್ರಚಾಪು

ಶೀಕಾಂತ ಎನಗಿಷ್ಟು ದಯ ಮಾಡೋ ತಂದೆ
ಏಕಾಂತದಲಿ ನಿನ್ನ ಭಜಿಸುವ ಸೌಭಾಗ್ಯ । ೧ ।

ಧನದಾಸೆಗಾಗಿನಾ ಧನಿಕರ ಮನೆಗಳ
ತಲೆಬಾಗಿಲಲಿನಿಂದು ತೊಳಲಿ ಬಳಲಿದೆನು । ೨ ।

ದೇಹಾಭಿಮಾನದಿಂದ ವಿಹಿತ ಕರ್ಮವ ತೊರೆದು
ಸ್ನೇಹಾನುಬಧನಾಗಿ ಸತಿ ಸುತರ ಪೊರೆದೆನು
ಏನಾದರೆನೆನ್ನ ಹೀನ ಗುಣಗಳನೆಲ್ಲ
ಮನ್ನಿಸಿ ಸಲಹೋ ಶ್ರೀ ಪುರಂದರವಿಠಲ । ೩ ।

**ಪ್ರಸನ್ನ ವೆಂಕಟೇಶದಾಸರು ಶ್ರೀನಿಕೇತನ**

ಶ್ರೀನಿಕೇತನ ಪಾಲಯಮ
ಜ್ಞಾನ ಗಮ್ಯ ಕರುಣಾ ನಿಧಿ
ನಿನ್ನಡಿಗಾನಮಿಸುವೆ ಪೊರೆ ದೀನದಯಾಳು । ಪ ।

ಜ್ಞಾನಮಾನದ ಶರಣರ ಸರ್ವದಾ
ನೀನೆಂದರಿತು ಸದ್ದನುರಾಗದಲಿ ಧ್ಯಾನಿಪೆ
ಮನದನುಮಾನವ ಕಳೆಯೋ । ೧ ।

ಶ್ರೀಕರಾರ್ತಿಥಪಾದಾರ್ಥ ಪರಾಕು ಅಚ್ಯುಥ
ಶೋಕನಾಶನ ವಿಶೋಕಜನಕ ಹೃತವ್ಯಾಕುಲ
ಕಳೆಯೋ ಕೃಪಾಕರ ಒಲಿದು । ೨ ।

ಪನ್ನಗಾಚಲ ನಿವಾಸ ಪ್ರಸನ್ನ ವತ್ಸಲ
ಬಿನ್ನಪ ಕೇಳೊ ಜಗನ್ನಾಥ ವಿಠಲ ಧನ್ಯನ ಮಾಡೊ
ಶರಣ್ಯ ಶರಣನ । ೩ ।

**ವಿಜಯ ದಾಸ -- ಶ್ರೀಶ ಕೊಳಲನೂದಿದನಂದು ಶ್ರೀಧರನಿಂದು**

ಶ್ರೀಶ ಕೊಳಲನೂದಿದನಂದು ಶ್ರೀಧರನಿಂದು
ವಾಸವ ವಂದಿತ ವಾತಜ ಸೇವಿತ ವಾಸುಕಿಶಯನನು ವಾರೇಸು ನೋಟದಿ । ಪ ।

ಬೆರಳ ಸಂದಿಲಿ ಮುರಳಿ ಪಿಡಿದು ಮುರಾರಿ ತಾನು
ಹರುಶದಿಂದಲಿ ಸ್ವರಗಳ ನುಡಿದು ವಾರಿಜ ನೇತ್ರ
ಅರಳು ಮಲ್ಲಿಗೆ ಸರಗಳ ಮುಡಿದು
ಮರುಳು ಮಾಡುತ ಮಡದಿಯರೆಲ್ಲರ ।೧ ।

ಗೌರಿ ಗಾಂಧಾರ ಗೌಳ ಪಂತು ಗೌರೀಶ ಭೂಷಣ
ಶೌರಿ ಸಾರಂಗ ಮೋಹನವಿಂತು ಸಾವೇರಿ ಸುರುಟಿ
ಭೈರವಿ ಜಾಗಡೆ ಊದುತ ನಿಂತು
ವೀರ ಶ್ರೀಕೃಷ್ಣ ವಿಧ ವಿಧ ರಾಗದಿ । ೨ ।

ನಾರದ ತುಂಬುರು ನಾಟ್ಯವನಾಡೆ ನಳಿನ ನಾಭನ
ಗಿರಿಜಾಪತಿಯು ವಂದಿಸಿ ಬೇಡೆ ಗೋಪಾಲಕೃಷ್ಣನ
ವರಗುರು ವಂದಿತ ವಿಜಯ ವಿಠ್ಠಲರಾಯ
ಹರುಷ ಪಡಿಸುತ ವನಿತೆಯರೆಲ್ಲರ । ೩ ।

**ಪುರಂದರ -- ತರಳೆ ರನ್ನೆ ಕಪ್ಪು**

ತರಳೆ ರನ್ನೆ ಕಪ್ಪು ಮೈಯವ ಯಾತರ ಚಲುವನೇ ? (ಪಾರ್ವತಿ ವಿಷ್ಣುವಿಗೆ ಹೇಳಿದ್ದು)
ಕರಿಯ ಜಟೆಯ ಜೋಗಿಗಿಂತ ಉತ್ತಮನಲ್ಲವೇನೇ ? (ಲಕ್ಷ್ಮಿ ಹರನಿಗೆ ಹೇಳಿದ್ದು)

ಜಲಧಿಯೊಳು ವಾಸವೇನೆ ಮನೆಗಳು ಇಲ್ಲವೆ ? (ಮತ್ಸ್ಯ)
ಲಲನೆ ಕೇಳು ಕಾಡಿಗಿಂತ ಲೇಸು ಅಲ್ಲವೇ ?

ಮಂದರ ಗಿರಿಯ ಪೊತ್ತಿಹುದು ಏನು ಚಂದವೇ ? (ಕೂರ್ಮ)
ಕಂದನ ಒಯ್ದು ಅಡವಿಯಲ್ಲಿಡುವುದು ಯಾವ ನ್ಯಾಯವೇ ?

ಮಣ್ಣನು ಅಗೆದು ಬೇರನೌ ಮೆಲುವುದು ಏನು ಸ್ವಾದವೇ ? (ವರಹ)
ತನ್ನ ಕೈಯಲ್ಲಿ ಕಪಾಲ ಪಿಡಿವುದು ಯಾವ ನ್ಯಾಯವೇ ?

ಮುತ್ತಿನ ಹಾರ ಇರಲು ಕರುಳ ಮಾಲೇ ಧರಿಸುವರೇ ? (ನಾರಸಿಂಹ)
ನಿತ್ಯ ರುಂಡ ಮಾಲೇ ಧರಿಸೋದು ಯಾವ ನ್ಯಾಯವೇ ?

ಗಿಡ್ಡನಾಗಿ ಬೆಳದು ಅಳೆವುದು ಏನು ನ್ಯಾಯವೇ ? (ವಾಮನ)
ಗುಡ್ಡದ ಮಗಳ ತಂದೆಗೆ ಮುನಿಯೋಧ್ಯವ ನ್ಯಾಯವೇ ?

ಪಿತನ ಮಾತ ಕೇಳಿ ಮಾತೆಯ ಶಿರವಾನಳಿವಾರೇ ? (ಪರಶುರಾಮ)
ಕ್ಷಿತಿ ಕಂಟನಾಗಿ ಇರುವುದು ಯಾವ ನ್ಯಾಯವೇ ?

ಕೊಡಗ ಕರದಿ ಕಪಿಗಳ ಹಿಂಡು ಬಂಧು ಬಳಗವೇ ? (ರಾಮ)
ಕೂಡಿ ಬಂದ ಭೂತ ಬಳಗ ಜ್ಞಾತಿ ಸಂಬಂಧವೇ ?

ಹಾವಿನ ಹೆಡೆಯ ತುಳಿವಾರೇನೇ ಅಂಜಿಕಿಲ್ಲವೇ ? (ಕೃಷ್ಣ)
ಹಾವೇ ಮೈಯಿಗೆ ಸುತ್ತಿ ಇರಲು ಹ್ಯಾಂಗೆ ಜೀವಿಪನೇ ?

ಬತ್ತಲು ಇರವನೇನು ಅವಗೆ ನಾಚಿಕಿಲ್ಲವೇ ? (ಬುದ್ಧ)
ಸತ್ತ ಗಜದ ಚರ್ಮ ಹೊದೆಯಲು ಹೇಸಿಕಿಲ್ಲವೇ ?

ಉತ್ತಮ ತೇಜಿ ಇರಲು ಧರೆಯೊಳು ಹದ್ದನು ಏರ್ವರೇ ? (ಕಲ್ಕಿ ?)
ಎತ್ತಿನ ಬೆನ್ನು ಏರಿದವರು ಬುದ್ಧಿವಂತರೇ ?

ಹರಿ ಹರರಿಗೆ ಸಾಮ್ಯವೇನೆ ಹೇಳೇ ರುಕ್ಮಿಣೀ ?
ಪುರಂದರ ವಿಠಲ ಸರ್ವೋತ್ತಮ ಕೇಳೆ ಭವಾನಿ

**ಕಮಲೇಶ ವಿಠಲ (ಆನಂದದಾಸ) -- ತುಂಗಾ ತೀರ ವಿರಾಜಮ್**

ತುಂಗಾ ತೀರ ವಿರಾಜಮ್ ಭಜಮನ
ರಾಘವೇಂದ್ರ ಗುರುರಾಯಮ್ ಭಜಮನ । ಪ ।

ಮಂಗಳಕರ ಮಂತ್ರಾಲಯ ವಾಸಮ್
ಶೃಂಗಾರಾನನ ವಿಲಸಿತ ಹಾಸಮ್

ರಾಘವೇಂದ್ರ ಗುರುರಾಯಮ್ ಭಜಮನ
ಕರಧೃತ ದಂಡ ಕಮಂಡಲ ಮಾಲಮ್

ಸುರುಚಿರ ಚೇಲಮ್ ಧೃತ ಮಣಿ ಮಾಲಮ್
ನಿರುಪಮ ಸುಂದರ ಕಾಯ ಸುಶೀಲಮ್

ವರ ಕಮಲೇಶಾರ್ಪಿತ ನಿಜ ಸಕಲಮ್
ರಾಘವೇಂದ್ರ ಗುರುರಾಯಮ್ ಭಜಮನ

**ಶ್ರೀಪಾದರಾಯರು -- ವಂದಿಪೆ ನಿನಗೆ ಗಣನಾತ**

ವಂದಿಪೆ ನಿನಗೆ ಗಣನಾಥ
ಮೊದಲ್ವಂದಿಪೆ ನಿನಗೆ ಗಣನಾಥ । ಪ ।

ಬಂದ ವಿಘ್ನ ಕಳೆಯೊ ಗಣನಾಥ
ಮೊದಲ್ವಂದಿಪೆ ನಿನಗೆ ಗಣನಾಥ ।ಅ.ಪ।

ಹಿಂದೆ ರಾವಣನು ಮದದಿಂದ ನಿನ್ನ ಪೂಜಿಸದೆ
ಸಂದ ರಣದಲ್ಲಿ ಗಣನಾಥ ॥ ವಂದಿಪೆ ॥

ಮಾಧವನ ಆಜ್ಞೆಯಿಂದ ಧರ್ಮರಾಯ ಪೂಜಿಸಿದ
ಸಾಧಿಸಿದ ರಾಜ್ಯ ಗಣನಾಥ ॥ ವಂದಿಪೆ ॥

ಮಂಗಳ ಮೂರುತಿ ಗುರು ರಂಗವಿಠಲನ ಪಾದ
ಭೃಂಗನೆ ಪಾಲಿಸೊ ಗಣನಾಥ ॥ ವಂದಿಪೆ ॥

**ಪುರಂದರ -- ವೇಂಕಟಾಚಲ ನಿಲಯಮ್**
ರಗ : ಸಿಂಧು ಭೈರವಿ ತಾಳ: ಆದಿ

ವೇಂಕಟಾಚಲ ನಿಲಯಮ್ ವೈಕುಂಟ ಪುರವಾಸಮ್
ಪಂಕಜ ನೇತ್ರಮ್ ಪರಮ ಪವಿತ್ರಮ್
ಶಂಖ ಚಕ್ರ ಧರ ಚಿನ್ಮಯ ರೂಪಮ್ । ವೇ ।

ಅಂಬುಜೋದ್ಭವ ವಿನುತಮ್ ಅಗಣಿತ ಗುಣನಾಮಮ್
ತುಂಬುರು ನಾರದ ಗಾನವಿಲೋಲಮ್
ಅಂಬುಜ ಶಯನಮ್ ಆತ್ಮ ವೀರಮ್ । ವೇ ।

ಸಕಲ ವೇದವಿಚಾರಮ್ ಸಾಧುಜನನಿಕರಮ್
ಮಕರ ಕುಂಡಲಧರ ಮದನ ಗೋಪಾಲಮ್
ಭಕ್ತ ಪೋಷಕ ಶ್ರೀ ಪುರಂದರ ವಿಠಲಮ್ । ವೇ।

**ಪುರಂದರ -- ವೆಂಕಟೇಶ ದಯಮಾಡು**
ರಾಗ: ಸಹಾನ ತಾಳ: ಆದಿ

ವೆಂಕಟೇಶ ದಯಮಾಡು
ವೇದವೇದ್ಯನೇ ದಯಮಾಡು । ವೆಂಕಟೇಶ ।

ಪಂಕಜಾಕ್ಷ ಅಭಯವಿತ್ತು
ರಕ್ಷಿಸೆನ್ನ ಬೇಗನೇ । ವೆಂಕಟೇಶ ।

ಚಿತ್ತ ಚಂಚಲವ ಬಿಡಿಸೋ
ಮತ್ತೆ ಕ್ರೋಧವ ಓಡಿಸೋ
ಭ್ರಾಂತಿ ವಿಷಯಗಳು ಬೇಡ
ಕಂತುಪಿತ ನಾರಾಯಣ । ವೆಂಕಟೇಶ ।

ಬಹಳ ಅಪರಾಧಿ ನಾನು
ನಿನ್ನ ಬಳಿಗೇ ಬಂದೆ ನಾನು
ಒಲಿದು ಎನ್ನ ರಕ್ಷಿಸಯ್ಯ
ಮೇಲುಗಿರಿ ಪುರಂದರ ವಿಠಲ । ವೆಂಕಟೇಶ ।

**ಕನಕ ದಾಸ –– ಯಾತಕೆ ದಯ**
ರಾಗ : ರೀತಿ ಗೌಳ ತಾಲ : ಆದಿ

ಯಾತಕೆ ದಯ ಮಾಡಲೊಲ್ಲೆ ರಂಗಯ್ಯ
ಜಗನ್ನಾಥ ನಿನ್ನ ನಂಬಿದೆ ರಂಗಯ್ಯ । ಯಾತಕೆ ।

ದಾಸರ ದಾಸನಯ್ಯ ರಂಗಯ್ಯ
ಭವ ಪಾಶಗಳ ಮೋಚನೆ ಮಾಡೊ ರಂಗಯ್ಯ । ಯಾತಕೆ ।

ಚಿಕ್ಕಂದು ಮೊದಲೇ ನಾ ರಂಗಯ್ಯ
ನೀನೆ ದಿಕ್ಕೆಂದು ನಂಬಿದೆನೋ ರಂಗಯ್ಯ । ಯಾತಕೆ ।

ನೆಂಟರಿಷ್ಟನು ನೀನೆ ರಂಗಯ್ಯ
ನಿನ್ನ ಬಂಟರಿಗೆ ಬಂಟನಯ್ಯ ರಂಗಯ್ಯ । ಯಾತಕೆ ।

ಶೇಷಗಿರಿವಾಸರಂಗಯ್ಯ
ಆದಿ ಕೇಶವನೆ ರಕ್ಷಿಸೋ ರಂಗಯ್ಯ । ಯಾತಕೆ ।